ಸಂಗ್ರಾಹಕ ಶ್ಲೋಕಗಳು

ಮಕಾರಾ ದಶ ಚಂಚಲಾಃ

ಸಪ್ತೈತೇ ಸ್ಥಿರಜೀವಿನಃ

ದಶ ದಾನಾಃ ಪ್ರಕೀರ್ತಿತಾಃ

ಸಪ್ತೈತೇ ಋಷಯಃ ಸ್ಮೃತಾಃ

ಪುರಾಣಾನಿ ಪ್ರಚಕ್ಷತೇ

ವಿದ್ಯಾವಿಧಿನಿಧಿ, ಮಹಾಮಹೋಪಾಧ್ಯಾಯ ವಿದ್ವಾನ್

ಡಾ|| ಕೆ. ಜಿ. ಸುಬ್ರಾಯಶರ್ಮಾ

“ವೇದಾಂತ ರತ್ನ”, “ಮಹಾಮಹೋಪಾಧ್ಯಾಯ” ಡಾ॥ ಕೆ. ಜಿ. ಸುಬ್ರಾಯಶರ್ಮಾರವರ
“108 ‘ಅಷ್ಟಕ’ ಸ್ತೋತ್ರಗಳು”–51 ಕೃತಿರತ್ನದ ಲೋಕಾರ್ಪಣಸಮಾರಂಭ, **31-7-2014**

“ಅಧ್ಯಾತ್ಮವಿದ್ಯಾಪ್ರವೀಣ”, ವಿದ್ವಾನ್ ಡಾ॥ ಕೆ. ಜಿ. ಸುಬ್ರಾಯಶರ್ಮಾರವರ
“ಜ್ಞಾನಸಾಧನಗಳು”–50 ಕೃತಿರತ್ನದ ಲೋಕಾರ್ಪಣಸಮಾರಂಭ, 28-6-2014, ಶನಿವಾರ

ಆನಂದಗ್ರಂಥಮಾಲಾ–ಕುಸುಮ 53

ಸಂಗ್ರಾಹಕ ಶ್ಲೋಕಗಳು

ಪ್ರವಚನಕಾರರು ಮತ್ತು ಲೇಖಕರು

ಅಧ್ಯಾತ್ಮವಿದ್ಯಾಪ್ರವೀಣ, ವೇದವಿದ್ಯಾಭೂಷಣ, ಅದ್ವೈತಜ್ಞಾನಸಿಂಧು, ವಿದ್ಯಾವಿಧಿನಿಧಿ,
ವೇದಶ್ರೀ, ವೇದಾಂತವಾರಿಧಿ, ವೇದಾಂತಭಾಸ್ಕರ, ವೇದಾಂತಸರಸ್ವತಿ, ವೇದಾಂತಕೇಸರಿ,
ವೇದಾಂತ ಸಾರ್ವಭೌಮ, ವೇದಾಂತಕಾಮಧೇನು, ವೇದಾಂತರಾಜಹಂಸ, ವಿವೇಕ ಭಾಸ್ಕರ,
ಶಾಸ್ತ್ರನಿಧಿ, ಅದ್ವೈತವೇದಾಂತಕೇಸರಿ, ಅದ್ವೈತಜ್ಞಾನತೇಜ, ವೇದಾಂತಸಾಗರ, ವೇದಾಂತರತ್ನ,
ವೇದಾಂತಚಿಂತಾಮಣಿ, ಅದ್ವೈತಸಾರತಿಲಕ, ವೇದಾಂತಪ್ರಭಾಕರ,
ಅದ್ವೈತ ವೇದಾಂತವಾರಿಧಿ, ಅದ್ವೈತವೇದಾಂತಚೂಡಾಮಣಿ, ಅದ್ವೈತವೇದತಿಲಕ,
ಅದ್ವೈತ ವೇದಾಂತವಿಚಕ್ಷಣ, ವೇದಾಂತಸಾರತಿಲಕ, ವೇದಾಗಮವಿದ್ಯಾಸಾಗರ,
ಸುವರ್ಣಕರ್ನಾಟಕ ಕನ್ನಡಿಗ, ಭುವಿ ವೇದಾಂತೈಕಶ್ರೇಷ್ಠರತ್ನ, ರಾಷ್ಟ್ರರತ್ನ,
ಸುವರ್ಣಕರ್ನಾಟಕ ಸುವರ್ಣವೇದಾಂತಿ, ವೇದಾಂತರತ್ನಾಕರ, ಸ್ವರ್ಣಭೂಷಣ,
ವೇದಾಂತಗಂಗಾಧರ, ಅದ್ವೈತವೇದಾಂತವಾಚಸ್ಪತಿ, ಅದ್ವೈತವೇದಾಂತಶಿಖಾಮಣಿ,
ಗೋವಿಂದಲಕ್ಷ್ಮೀಪುರಸ್ಕಾರ, ಬಸವನಗುಡಿರತ್ನ, ಶ್ರೀ ಶ್ರೀ ಸದ್ಗುರುಹೃದಯಭಾಸ್ಕರ,
ಅದ್ವೈತವೇದಾಂತ ಸವ್ಯಸಾಚಿ, ಸದ್ಗುರು ಸೇವಾ ಧುರೀಣ, ಪರಿಪೂರ್ಣ ಮಹನೀಯ ೨೦೧೨,
ಮಂತ್ರಾಲಯದ ಶ್ರೀಶ್ರೀಸುಶಮೀಂದ್ರತೀರ್ಥಸ್ವಾಮೀಜಿ "ರಾಷ್ಟ್ರೀಯ ಜ್ಞಾನ ಪುರಸ್ಕಾರ",
ಅದ್ವೈತ ವೇದಾಂತ ಪ್ರತಿಭಾ ಪ್ರಕಾಶಃ, ಜಿಜ್ಞಾಸುಕಾಮಧೇನು, ಮುಮುಕ್ಷುಮೋಕ್ಷಧೇನು,
ಉಪನಿಷದ್ ರತ್ನಾಕರ, ಶ್ರೀ ಸಿದ್ಧಾರೂಢ ಸದ್ಭಾವನಾ ಪ್ರಶಸ್ತಿ, ವೇದಾಂತ ಪ್ರವಚನ ಚತುರ,
ವೇದಾಂತ ಪುರುಷಮಣಿ, ಶಾಂಕರಾದ್ವೈತವೇದಾಂತಾಚಾರ್ಯ, ಅದ್ವೈತವೇದಾಂತಸಾರಥಿ,
ಸುವರ್ಣ ಕರ್ನಾಟಕ "ರಾಜ್ಯೋತ್ಸವ ಪ್ರಶಸ್ತಿ"—೨೦೦೫, ಮತ್ತು
"ಸುವರ್ಣ ಕರ್ನಾಟಕ ಸಾಹಿತ್ಯ ಪ್ರಶಸ್ತಿ" ಪುರಸ್ಕೃತ

ವೇದಾಂತಚಕ್ರವರ್ತಿ, ಮಹಾಮಹೋಪಾಧ್ಯಾಯ ವೇ. ಬ್ರ. ಶ್ರೀ ವಿದ್ವಾನ್
ಡಾ॥ ಕೆ. ಜಿ. ಸುಬ್ರಾಯಶರ್ಮಾ, ಎಂ.ಎ., ಡಿ.ಲಿಟ್.,
(ಶ್ರೀಶ್ರೀಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳ ಅಂತೇವಾಸಿ ಸಾಕ್ಷಾತ್‌ಶಿಷ್ಯರು)

ಪ್ರಕಾಶಕರು
ಶ್ರೀ ನಿತ್ಯಾನಂದ ಪ್ರಕಾಶನ
ಅಶೋಕನಗರ, ಬೆಂಗಳೂರು - 560 050
ಸೆಪ್ಟೆಂಬರ್ 2014

ಸಂಗ್ರಾಹಕ ಶ್ಲೋಕಗಳು
Sangraahaka Shlokagalu in Kannada
53rd Flower in the **'Ananda Grantha Maala'** Series
by Vedanta Chakravarthi, Mahaamahopaadhyaaya, Vidwan
Dr. K. G. SUBRAYA SHARMA, M.A., D.Litt.,
127, **"Seetha-Preethi"**, Balaji Nagar,
ICICI Bank Cross Road, Uttarahalli Main Road
P. O. **Subrahmanyapura, Bengaluru - 560 061**
Ph : 080-2639 6786 ; Mobile : 98862 81622
e-mail: kgssharma@gmail.com

Published by
Sri Nithyananda Prakashana
No. 46, 4th Cross, Ashoknagar
Bengaluru - 560 050; Ph: 080 - 2242 6027

Pages: 48; Price: Rs. 40/- ; ಬೆಲೆ: ರೂ. 40/-

First Edition : September 2014 ; 1000 Copies

© All Rights Reserved by the **Author**

© ಈ ಗ್ರಂಥದ ಹಕ್ಕುಗಳೆಲ್ಲವೂ ಲೇಖಕರಿಗೆ ಸೇರಿವೆ.

For Copies and other Books Please Contact
Vedanta Ratna, Mahaamahopaadhyaaya, Vidwan
Dr. K. G. SUBRAYA SHARMA, M.A., D.Litt.,
 # 127, "Seetha-Preethi", Balaji Nagar,
ICICI Bank Cross Rd., Uttarahalli Main Rd.
P. O. Subrahmanyapura, Bengaluru - 560 061
Ph: 080-2639 6786 ; Mobile: 98862 81622
e-mail: kgssharma@gmail.com

Printed by
B. N. Nataraj
Sri Nithyananda Prakashana
46, 4th Cross, Ashoknagar, BSK 1st Stage
Bengaluru - 560 050. ✆ 2242 6027

ನಮೋ ನಮಃ ಸದ್ಗುರುಪಾದುಕಾಭ್ಯಾಮ್

ಗುರುಪ್ರಸಾದಃ ಸಕಲಂ ದದಾತಿ ಎಂಬ ಅನುಭವಿಗಳ ಮಾತಿಗೆ ನಾನೇ ಜೀವಂತ ಹಾಗೂ ಜ್ವಲಂತ ಉದಾಹರಣೆಯಾಗಿದ್ದೇನೆ. ೧೯೫೯ ರಿಂದ ೧೯೭೫ರ ವರೆಗೂ ನಾನು ಮಾಡಿದ ದೊಡ್ಡ ತಪಸ್ಸು ಎಂದರೆ **ಸದ್ಗುರುಕೌಪೀನ ಕ್ಷಾಲನ**. ಅಷ್ಟರಿಂದಲೇ ನಾನು ನನ್ನನ್ನು **ಕೃತಕೃತ್ಯ**ನೆಂದೇ ಭಾವಿಸಿರುತ್ತೇನೆ. ಸದ್ಗುರುಕಾರುಣ್ಯವು ಹಳ್ಳಿಹೈದನಾದ ನನ್ನನ್ನು ಈಗ ಈ ಮಟ್ಟಕ್ಕೆ ಬೆಳೆಸಿದೆ. ನನ್ನ ಸಂಪೂರ್ಣ ಬಂಡವಾಳವೆಂದರೆ ಸದ್ಗುರುಕೃಪಾನುಗ್ರಹ. ಸದ್ಗುರುಗಳೇ ನನಗೆ ಸಕಲಸಂಪತ್ತು! ಇಂಥ ಕಾರುಣ್ಯಸಿಂಧು ಸದ್ಗುರುವಿನ ಪವಿತ್ರಪಾದಕಮಲಂಗಳಲ್ಲಿ ಹಿಂದಿನಂತೆಯೇ ಈ ಕೃತಿರತ್ನವನ್ನೂ ನನ್ನ ಭಕ್ತಿಪೂರ್ವಕ ದೀರ್ಘದಂಡ ಸಾಷ್ಟಾಂಗಪ್ರಣಾಮಗಳೊಂದಿಗೆ ಸಮರ್ಪಿಸುತ್ತಿದ್ದೇನೆ.

ಪ್ರವಚನಗಳ ಹಾಗೂ ಉಪನ್ಯಾಸಗಳ ಮಧ್ಯೇ ಮಧ್ಯೇ **ಸಂಗ್ರಾಹಕ ಶ್ಲೋಕ**ಗಳನ್ನು ಉದಾಹರಿಸುತ್ತಲೇ ಇರುತ್ತೇನೆ. ಒಂದೊಂದೇ ಶ್ಲೋಕದಲ್ಲಿ ನಾಲ್ಕು, ಐದು, ಹತ್ತು, ಹದಿನಾಲ್ಕು ವಿಷಯಗಳು ಸಂಗೃಹೀತವಾಗಿರುತ್ತವೆ. ಇವುಗಳನ್ನೆಲ್ಲ ಬಿಡಿಬಿಡಿಯಾಗಿ ಬೇರೆಬೇರೆಯಾಗಿ ಗಟ್ಟುಮಾಡುವುದು ಎಲ್ಲರಿಗೂ ಸುಲಭವಲ್ಲ. ಆದರೆ, ಅಂಥ ಶ್ಲೋಕಗಳನ್ನು ಎಲ್ಲರೂ ಸುಲಭವಾಗಿ ಹಾಗೂ ಸರಳವಾಗಿ ಗಟ್ಟುಮಾಡಬಹುದಲ್ಲವೇ? ನನಗೆ ಪಾಠಮಾಡುವಾಗ ಸದ್ಗುರುಗಳೇ ಈ ಶ್ಲೋಕಗಳನ್ನೆಲ್ಲ ಬಾಯಿಪಾಠಮಾಡಿಸಿದ್ದಾರೆ. ಅವುಗಳಲ್ಲಿ ಕೇವಲ ನಲವತ್ತು ಶ್ಲೋಕಗಳನ್ನು ಮಾತ್ರ ಆರಿಸಿಕೊಂಡು ನಾನು **"ಸಂಗ್ರಾಹಕ ಶ್ಲೋಕಗಳು"** ಎಂಬೀ ಗ್ರಂಥದಲ್ಲಿ ಅಡಕಮಾಡಿರುತ್ತೇನೆ. ಇದೆಲ್ಲವೂ ಪೂಜ್ಯ ಸದ್ಗುರುಗಳ ಸಂಪೂರ್ಣ ಕೃಪಾಶೀರ್ವಾದದ ಫಲವೆಂದೇ ನಾನು ನಂಬಿರುತ್ತೇನೆ. ಬಾಲಕರಿಗೂ ವಿದ್ಯಾರ್ಥಿಗಳಿಗೂ ಹಾಗೂ ವಿದ್ವಾಂಸರಿಗೂ ಇದರಿಂದ ಹೆಚ್ಚಿನ ಪ್ರಯೋಜನವು ಉಂಟಾಗಬಹುದೆಂದು ನಾನು ಭಾವಿಸಿರುತ್ತೇನೆ.

ನನ್ನ ಪ್ರೀತಿಯ ಸನ್ಮಿತ್ರರೂ ಸದ್ಗುರುಭಕ್ತರೂ ಆದ ಸನ್ಮಾನ್ಯರಾದ ಶ್ರೀ ಬಿ. ಎನ್. ನಟರಾಜ್ ರವರು ಈ ಕೃತಿಯನ್ನು ತುಂಬು ಪ್ರೀತಿಯಿಂದ ಮುದ್ರಿಸಿ ಕೊಟ್ಟಿದ್ದಾರೆ. ಪ್ರೀತಿಯ ಕೆಲವು ಜಿಜ್ಞಾಸುಗಳು ಇದರ ಕರಡನ್ನು ತಿದ್ದಿಕೊಟ್ಟಿರುತ್ತಾರೆ. ಇವರಿಗೆಲ್ಲ ನನ್ನ ಕೃತಜ್ಞತಾಪ್ರಣಾಮಗಳನ್ನು ಈ ಮೂಲಕ ತಿಳಿಸುತ್ತೇನೆ.

॥ ನಮೋ ನಮಃ ಸದ್ಗುರುಪಾದುಕಾಭ್ಯಾಮ್ ॥

ಶ್ರೀ **"ಜಯ"** ಸಂವತ್ಸರದ ಭಾದ್ರಪದ ಶುದ್ಧ
ಪೂರ್ಣಿಮಾ, **ಅನಂತನ ಹುಣ್ಣಿಮೆ**
ತಾ॥ 8-9-2014, ಸೋಮವಾರ

ಸದ್ಗುರುಚರಣಧೂಳಿಃ
ಡಾ॥ ಕೆ. ಜಿ. ಸುಬ್ರಾಯಶರ್ಮಾ
98862 81622, 2639 6786

ಸಂಗ್ರಾಹಕ ಶ್ಲೋಕಗಳು

ಸಂಸ್ಕೃತ ಭಾಷೆಯ ಸೌಂದರ್ಯವು ವಾಸವಾಗಿರುವುದು ಶ್ಲೋಕಗಳಲ್ಲಿಯೇ. ಶ್ಲೋಕಗಳೆಂದರೆ ಅನುಷ್ಟುಪ್‌ಛಂದಸ್ಸಿನ ಪದ್ಯಗಳೇ. ಅನುಷ್ಟುಪ್ ಛಂದಸ್ಸಿನ ಸೊಬಗನ್ನೂ ಸೌಂದರ್ಯವನ್ನೂ ಕಂಡೇ ಮಹಾಕವಿಗಳು ತಮ್ಮತಮ್ಮ ಕಾವ್ಯಗಳನ್ನು ಅನುಷ್ಟುಪ್ ಛಂದಸ್ಸಿನಲ್ಲಿಯೇ ರಚಿಸಿರುತ್ತಾರೆ. ರಾಮಾಯಣ, ಭಾರತ, ಭಾಗವತ, ಹದಿನೆಂಟು ಪುರಾಣಗಳು, ಮನುಸ್ಮೃತಿ, ಧರ್ಮಶಾಸ್ತ್ರ, ಸ್ಮೃತಿಗ್ರಂಥಗಳು—ಹೀಗೆ ಎಲ್ಲಾ ಗ್ರಂಥಗಳಲ್ಲಿಯೂ ಶ್ಲೋಕಗಳು ಬಹಳಮಟ್ಟಿಗೆ **ಅನುಷ್ಟುಪ್‌ಛಂದಸ್ಸಿ**ನಲ್ಲಿಯೇ ಇರುತ್ತವೆಯಲ್ಲವೇ? ಹೀಗಾಗಿ **ಅನುಷ್ಟುಪ್ ಛಂದಸ್ಸಿಗೆ ಛಂದೋರಾಜ** ಎಂದೇ ಹೆಸರಿದೆ. ಹೀಗಾಗಿ ಈ ಕೃತಿಯಲ್ಲಿಯೂ ನಲವತ್ತು ಶ್ಲೋಕಗಳು ಅನುಷ್ಟುಪ್‌ಛಂದಸ್ಸಿನಲ್ಲಿಯೇ ಇರುತ್ತವೆ.

ಈ ಗ್ರಂಥದ ಹೆಸರು **ಸಂಗ್ರಾಹಕ ಶ್ಲೋಕಗಳು** ಎಂದಿದೆಯೇ ಹೊರತು **ಸಂಗ್ರಾಹ್ಯಶ್ಲೋಕಗಳು** ಎಂದಲ್ಲ. ಸಂಗ್ರಾಹಕ ಎಂದರೆ **ಸಂಗ್ರಾಹಯಂತಿ ಇತಿ ಸಂಗ್ರಾಹಕಾಃ,** ಸಂಗ್ರಹವನ್ನು ಮಾಡುವ ಎಂದರ್ಥ. ಈ ಗ್ರಂಥದಲ್ಲಿರುವ ಪ್ರತಿಯೊಂದು ಶ್ಲೋಕವೂ **ಸಂಗ್ರಾಹಕ**ವಾಗಿರುತ್ತದೆ. ನಾಲ್ಕು, ಐದು, ಆರು, ಎಂಟು, ಹತ್ತು, ಹನ್ನೆರಡು, ಹದಿನಾಲ್ಕು ವಿಷಯಗಳನ್ನು ಒಂದೇ ಕಡೆಯಲ್ಲಿ ಸಂಗ್ರಹಿಸಿ, ಸೂಚಿಸುವ ಈ ಶ್ಲೋಕಗಳು ನಿಜವಾಗಿಯೂ **ಸಂಗ್ರಾಹಕ ಶ್ಲೋಕಗಳೇ** ಆಗಿರುತ್ತವೆ. ಉದಾಹರಣೆಗೆ: ಆರು ವೇದಾಂಗಗಳು, ಅಷ್ಟ ಸಿದ್ಧಿಗಳು, ಅಷ್ಟಾದಶ ಪುರಾಣಗಳು, ನವ ವೈಯ್ಯಾಕರಣರು, ಪಂಚ ಯಜ್ಞಗಳು, ದಶ ಅವತಾರಗಳು, ಸಪ್ತ ಚಿರಂಜೀವಿಗಳು, ಆರು ಕಾರಕವಿಭಕ್ತಿಗಳು, ನವ ಕವಿರತ್ನಗಳು, ಹತ್ತು ಅವತಾರಗಳು ಇತ್ಯಾದಿ ಇತ್ಯಾದಿ.

ಒಂದೊಂದೇ ಪುಟದಲ್ಲಿರುವ ಆಯಾ ಒಂದೊಂದೇ ವಿಷಯವನ್ನು ಅಷ್ಟಷ್ಟೇ ಸ್ವತಂತ್ರವಾಗಿ ಓದಿಕೊಳ್ಳಬಹುದು. ಹಿಂದಿನದಕ್ಕೂ ಮುಂದಿನದಕ್ಕೂ ಯಾವ ಸಂಬಂಧವೂ ಇಲ್ಲ. ಒಂದೊಂದೇ ಶ್ಲೋಕದಲ್ಲಿ ಅಂದರೆ ನಾಲ್ಕೇ ಪಾದಗಳಲ್ಲಿ ಎಂದರೆ ಮೂವತ್ತೆರಡೇ ಅಕ್ಷರಗಳಲ್ಲಿ ಇಷ್ಟೆಲ್ಲಾ ವಿಷಯಗಳನ್ನು ಸಂಗ್ರಹಮಾಡಿ ಸರಳವಾಗಿ ತಿಳಿಸಿರುವುದೇ ಈ ಶ್ಲೋಕಗಳ ವಿಶೇಷ.

ಇಂಥ ಸಂಗ್ರಾಹಕ ಶ್ಲೋಕಗಳು ತರ್ಕ, ಮೀಮಾಂಸಾ, ವ್ಯಾಕರಣ, ಜ್ಯೋತಿಷ್ಯ, ಅಲಂಕಾರ, ವೇದಾಂತಶಾಸ್ತ್ರಗಳಲ್ಲಿ ಸಾಕಷ್ಟು ಇವೆ. ಸದ್ಯಕ್ಕೆ ನಾನು ಇಲ್ಲಿ ಕೇವಲ ನಲವತ್ತು ಸಂಗ್ರಾಹಕ ಶ್ಲೋಕಗಳನ್ನು ಸಂಗ್ರಹಿಸಿರುತ್ತೇನೆ. ಇದೆಲ್ಲವೂ ನನ್ನ ಸದ್ಗುರುಗಳ ಕೃಪಾಶೀರ್ವಾದವೇ ಎಂಬುದು ನೆನಪಿರಲಿ.

ತಾ॥ 11-9-2014, ಗುರುವಾರ **ಡಾ॥ ಕೆ. ಜಿ. ಸುಬ್ರಾಯಶರ್ಮಾ**

“ಸಂಗ್ರಾಹಕ ಶ್ಲೋಕಗಳು” ಅಂತರಂಗ

	ನಮೋ ನಮಃ ಸದ್ಗುರುಪಾದುಕಾಭ್ಯಾಮ್	iii
	ಸಂಗ್ರಾಹಕ ಶ್ಲೋಕಗಳು	iv
1.	ಆರು ವೇದಾಂಗಗಳು	1
2.	ಸಪ್ತ ಮಹರ್ಷಿಗಳು	2
3.	ಪಂಚ ಪಾಂಡವರು	3
4.	ಹತ್ತು ಮಕಾರಗಳು ಚಂಚಲ	4
5.	ಆರು ಕಾರಕಾರ್ಥ ವಿಭಕ್ತಿಗಳು	5
6.	ಐದು ಅತ್ಯಂತ ಪವಿತ್ರವಾದ ವಸ್ತುಗಳು	6
7.	ಪಂಚ ವಿಷಯಗಳು	7
8.	ಸಪ್ತ ಮಾತೃಕಾದೇವತೆಯರು	8
9.	ದಶ ಉಪನಿಷತ್ತುಗಳು	9
10.	ನವ ‘ಕವಿರತ್ನ’ಗಳು	10
11.	ಅಷ್ಟ ಸಿದ್ಧಿಗಳು	11
12.	ಹದಿನಾಲ್ಕು ವಿದ್ಯಾಸ್ಥಾನಗಳು	12
13.	ಆರು ಶ್ರೇಷ್ಠಪಾತಕರು	13
14.	ಸಪ್ತ ಚಿರಂಜೀವಿಗಳು	14
15.	ಪಂಚ ಜ್ಞಾನೇಂದ್ರಿಯಗಳು	15
16.	ನಮಸ್ಕಾರದ ಎಂಟು ಅಂಗಗಳು	16
17.	ಆರು ಭಗಗಳು	17
18.	ಭಾರತದಲ್ಲಿನ ಪಂಚ ರತ್ನಗಳು	18
19.	ಹದಿನೆಂಟು ಪುರಾಣಗಳು	19
20.	ದಶ ದಾನಗಳು	20

21. ಐದು ವೀರವೈಷ್ಣವರು 21
22. ಮೂರು ವೇದಾಂತಪ್ರಸ್ಥಾನಗಳು 22
23. ನವ ಕಾವ್ಯರಸಗಳು 23
24. ಪಂಚ ಮಹಾಯಜ್ಞಗಳು 24
25. ದಂಡಕ್ಕೆ ದಶ ಗುಣಗಳು 25
26. ಹತ್ತು ಅವತಾರಗಳು 26
27. ಹತ್ತು ಧರ್ಮಲಕ್ಷಣಗಳು 27
28. ಆರು ಪಾತಕಾಧಮರು 28
29. ನವ ವೈಯ್ಯಾಕರಣರು 29
30. ಆರು ಅನ್ನರಸಗಳು 30
31. ನವ ಗ್ರಹಗಳು 31
32. ಚತುರ್ದಶ ಕರಣಗಳು 32
33. ನವ ನವಗ್ರಹಧಾನ್ಯಗಳು 33
34. ನಾಲ್ಕು ವಾಕ್ಕುಗಳು 34
35. ಪಂಚ ಕೋಶಗಳು 35
36. ಆರು ವಿಪ್ರಕರ್ಮಗಳು 36
37. ಪಂಚ ಪ್ರಾಣಗಳು 37
38. ಮನ್ಮಥನ ಪಂಚ ಬಾಣಗಳು 38
39. ಸಪ್ತ ಸ್ವರಗಳು 39
40. ಏಳು ಮೋಕ್ಷಪ್ರಾಪ್ತಿ ನಗರಿಗಳು 40
41. डाक्टर् आफ् लिटरेचर् (डि.लिट्.) 41
42. ಗ್ರಂಥಗಳ ಪಟ್ಟಿ 42

1. ಆರು ವೇದಾಂಗಗಳು

ವೇದಗಳು ನಾಲ್ಕು; ವೇದಪುರುಷನಿಗೆ **ಆರು** ಅಂಗಗಳು. ಅವುಗಳಿಗೆ **ಷಡಂಗಗಳು** ಎಂದು ಹೆಸರು. ಅವುಗಳನ್ನು ಈ ಶ್ಲೋಕದಲ್ಲಿ ಸಂಗ್ರಹಿಸಿದೆ:

ಶಿಕ್ಷಾ ವ್ಯಾಕರಣಂ ಛಂದೋ ನಿರುಕ್ತಂ ಜ್ಯೋತಿಷಂ ತಥಾ।
ಕಲ್ಪಶ್ಚೇತಿ "ಷಡಂಗಾನಿ" ವೇದಸ್ಯಾಹುರ್ಮನೀಷಿಣಃ॥

ಶಿಕ್ಷಾ: ವೇದಮಂತ್ರಗಳನ್ನು ಅಧ್ಯಯನಮಾಡುವಾಗ ಅನುಸರಿಸಬೇಕಾದ ವಿಧಾನ. ಉಚ್ಚಾರಣೆಯ ವಿಧಿಯನ್ನು ತಿಳಿಸುವ ಭಾಗವಿದು. **ಶಿಕ್ಷಾ ಘ್ರಾಣಂ ತು ವೇದಸ್ಯ**, ಶಿಕ್ಷಾ ಎಂಬುದು ವೇದಪುರುಷನ ಘ್ರಾಣೇಂದ್ರಿಯವಾಗಿರುತ್ತದೆ.

ವ್ಯಾಕರಣಂ: ನವವ್ಯಾಕರಣಗಳೆಂದು ಪ್ರಸಿದ್ಧವಾಗಿದ್ದರೂ ಪಾಣಿನಿಮಹರ್ಷಿಗಳ ವ್ಯಾಕರಣವು ಅತ್ಯಂತ ಮುಖ್ಯವಾದದ್ದು. "**ಮುಖಂ ವ್ಯಾಕರಣಂ ಸ್ಮೃತಮ್**". ವೇದಗಳ ಅರ್ಥವನ್ನು ಸರಿಯಾಗಿ ತಿಳಿಯಲು ವ್ಯಾಕರಣ ಶಾಸ್ತ್ರವು ಬೇಕೇಬೇಕು.

ಛಂದಃ: ಛಂದಸ್ ಶಾಸ್ತ್ರವು ವೇದಪುರುಷನಿಗೆ ಪಾದಗಳಂತಿರುತ್ತವೆ. **ಛಂದಃ ಪಾದೌ ತು ವೇದಸ್ಯ**. ಗಾಯತ್ರೀ, ಉಷ್ಣಿಕ್, ಅನುಷ್ಟುಪ್ ಮುಂತಾದ ಛಂದಸ್ಸಿನ ಮಂತ್ರಗಳು ವೇದಗಳಲ್ಲಿ ಇರುತ್ತವೆಯಲ್ಲವೇ?

ನಿರುಕ್ತಂ: ಎಂದರೆ ವೈದಿಕಕೋಶ. ನಿರುಕ್ತದ ಸಹಾಯವಿಲ್ಲದೆ ಹೋದರೆ ವೇದ ಮಂತ್ರಗಳಿಗೆ ಸಂಪೂರ್ಣವಾದ ಅರ್ಥವು ತಿಳಿಯದು. **ನಿರುಕ್ತಂ ಶ್ರೋತ್ರ ಮುಚ್ಯತೇ.**

ಜ್ಯೋತಿಷಂ: ಜ್ಯೋತಿಷ ಎಂದರೆ ಗ್ರಹ, ನಕ್ಷತ್ರಗಳ ಸ್ಥಾನವನ್ನು ನೋಡಿಕೊಂಡು ಯಾಗಾದಿಗಳಿಗೆ ಮುಹೂರ್ತಾದಿಗಳನ್ನು ನಿರ್ಣಯಮಾಡುವ ಶಾಸ್ತ್ರ. **ಜ್ಯೋತಿಷಾಮ್ ಅಯನಂ ಚಕ್ಷುಃ**, ಜ್ಯೋತಿಷವು ವೇದಪುರುಷನಿಗೆ ಕಣ್ಣು.

ಕಲ್ಪ: ಎಂದರೆ ಯಜ್ಞಯಾಗಾದಿಗಳನ್ನು ಮಾಡುವ ವಿಧಿವಿಧಾನಗಳನ್ನು ತಿಳಿಸುವ ಶಾಸ್ತ್ರ. ಯಜ್ಞಶಾಲಾ, ಯಜ್ಞವೇದಿಕಾ, ಯಜ್ಞಕುಂಡಗಳ ಅಳತೆ ಮುಂತಾದದ್ದನ್ನು ತಿಳಿಸುವ ಶಾಸ್ತ್ರವಿದು. **ಹಸ್ತೌ ಕಲ್ಪೋಽಥ ಕಥ್ಯತೇ.**

ಷಡಂಗಸಮೇತವಾಗಿಯೇ ವೇದಗಳನ್ನು ಅಧ್ಯಯನಮಾಡಬೇಕು.

2. ಸಪ್ತ ಮಹರ್ಷಿಗಳು

ನಮ್ಮೀ ಭಾರತದೇಶದಲ್ಲಿ ಸಹಸ್ರಾರು ಮಹರ್ಷಿಗಳು ವೇದಶಾಸ್ತ್ರಪುರಾಣಗಳನ್ನು ಸಂರಕ್ಷಿಸಿರುತ್ತಾರೆ. ಇವರಲ್ಲಿ ಗೋತ್ರಪ್ರವರ್ತಕರು, ಸೂತ್ರಕಾರರು, ಮಂತ್ರದ್ರಷ್ಟಾರರು, ವೇದಸಂರಕ್ಷಕರು—ಹೀಗೆ ಎಲ್ಲರೂ ಮಹಾತ್ಮರೇ. ಆದರೆ "**ಸಪ್ತರ್ಷಿ**"ಗಳೆಂದೇ ಪ್ರಸಿದ್ಧರಾದ ಏಳು ಋಷಿಗಳ ಹೆಸರುಗಳನ್ನು ಮಾತ್ರ ಈ ಕೆಳಗಿನ ಶ್ಲೋಕದಲ್ಲಿ ಸಂಗ್ರಹಿಸಲಾಗಿದೆ. ಅವರುಗಳು ಯಾರೆಂದರೆ:

ಕಶ್ಯಪೋಽತ್ರಿರ್ಭರದ್ವಾಜಃ ವಿಶ್ವಾಮಿತ್ರೋಽಥ ಗೌತಮಃ।
ಜಮದಗ್ನಿರ್ವಸಿಷ್ಠಶ್ಚ "ಸಪ್ತೈತೇ ಋಷಯಃ" ಸ್ಮೃತಾಃ॥

ಕಶ್ಯಪಮಹರ್ಷಿ: ಕಲಾ ಮತ್ತು **ಮರೀಚಿ**ಗಳೆಂಬ ಪುಣ್ಯದಂಪತಿಗಳ ಸುಪುತ್ರರೇ ಕಶ್ಯಪರು. ಕಶ್ಯಪರಿಗೆ ಹದಿಮೂರು ಪತ್ನಿಯರು. **ದಿತಿ**ಯ ಪುತ್ರರು ದೈತ್ಯರು. **ಅದಿತಿ**ಯ ಸುಪುತ್ರರೇ ಆದಿತ್ಯರು. **ಕಶ್ಯಪ**ಗೋತ್ರದವರು ಅಸಂಖ್ಯಾತರಿದ್ದಾರೆ.

ಅತ್ರಿ ಮಹರ್ಷಿ: ಅನಸೂಯಾ ಅತ್ರಿದಂಪತಿಗಳು ಮಹಾತಪೋಮೂರ್ತಿಗಳು. ಪತಿವ್ರತಾಶಿರೋರತ್ನ ಅನಸೂಯಾದೇವಿ. ತ್ರಿಮೂರ್ತಿಗಳ ಅನುಗ್ರಹದಿಂದ ದೂರ್ವಾಸ, ದತ್ತಾತ್ರೇಯ, ಚಂದ್ರರು ಇವರಿಗೆ ಪುತ್ರರಾಗಿ ಜನಿಸುತ್ತಾರೆ.

ಭರದ್ವಾಜ ಮಹರ್ಷಿ: ಸಂಪೂರ್ಣವೇದಗಳನ್ನು ಅಧ್ಯಯನಮಾಡುವುದಕ್ಕಾಗಿ ವ್ರತನಿಷ್ಠರಾಗಿದ್ದ ಮಹರ್ಷಿಗಳು. ಸುಶೀಲಾದೇವಿಯ ಪತಿ ಭರದ್ವಾಜರು.

ವಿಶ್ವಾಮಿತ್ರ ಮಹರ್ಷಿ: ಕ್ಷತ್ರಿಯ ರಾಜನಾಗಿದ್ದ ವಿಶ್ವರಥನು ಘೋರ ತಪಸ್ಸನ್ನು ಆಚರಿಸಿ ವಿಶ್ವಾಮಿತ್ರಮಹರ್ಷಿಯಾದನು. ಶ್ರೀರಾಮಲಕ್ಷ್ಮಣರಿಗೆ ಇವರು ವಿದ್ಯಾಗುರುಗಳೂ ಹೌದು.

ಗೌತಮ ಮಹರ್ಷಿಗಳು: ಅಹಲ್ಯಾದೇವಿಯ ಪತಿಯಾದ ಗೌತಮರು ಮಹಾತಪಸ್ವಿಗಳು. ಪ್ರದ್ವೇಷಿಣೀ ಹಾಗೂ ದೀರ್ಘತಮರೆಂಬ ದಂಪತಿಗಳ ಸುಪುತ್ರರೇ ಗೌತಮರು.

ಜಮದಗ್ನಿ ಮಹರ್ಷಿಗಳು: ಸತ್ಯವತೀ ಹಾಗೂ ಋಚೀಕದಂಪತಿಗಳ ಸುಪುತ್ರರಾದ ಜಮದಗ್ನಿಗಳು ಪರಶುರಾಮನ ತಂದೆ. ಜಮದಗ್ನಿಗಳು ಅಗ್ನಿಯಂತೆ ಉಗ್ರರೂ ಹೌದು.

ವಸಿಷ್ಠ ಮಹರ್ಷಿಗಳು: ಸೂರ್ಯವಂಶದ ಕುಲಪುರೋಹಿತರಾದ ವಸಿಷ್ಠರು ಶ್ರೀರಾಮನಿಗೆ ಬ್ರಹ್ಮವಿದ್ಯೋಪದೇಶಕರಾದ ಆಚಾರ್ಯರೂ ಹೌದು. ಇವರು ಅರುಂಧತೀಪತಿ.

ಇವರೇ ಉಪಪ್ರಜಾಪತಿಗಳೆಂಬ **ಸಪ್ತಮಹರ್ಷಿ**ಗಳೆಂದು ಪ್ರಸಿದ್ಧರಾಗಿರುತ್ತಾರೆ.

3. ಪಂಚ ಪಾಂಡವರು

ಪಾಂಡುರಾಜನಿಗೆ ಕುಂತಿ ಮತ್ತು ಮಾದ್ರಿ ಎಂದು ಇಬ್ಬರು ಪತ್ನಿಯರು. ಇವರಿಬ್ಬರಿಂದ ಪಾಂಡುವಿಗೆ ಒಟ್ಟು ಐದು ಪುತ್ರರು. ಅವರೇ **ಪಂಚ ಪಾಂಡವರು.** ಈ ಕೆಳಗಿನ ಶ್ಲೋಕದಲ್ಲಿ **ಪಂಚ** ಪಾಂಡವರನ್ನು ಸಂಗ್ರಹಿಸಿ ಹೇಳಿದೆ:

ಧರ್ಮರಾಜೋ ಭೀಮಸೇನಃ ಫಾಲ್ಗುಣಶ್ಚೈವ ಮಧ್ಯಮಃ।
ನಕುಲಃ ಸಹದೇವಶ್ಚ "ಪಂಚೈತೇ ಪಾಂಡವಾಃ ಸ್ಮೃತಾಃ"॥

೧. **ಧರ್ಮರಾಜ:** ಹೆಸರಿಗೆ ತಕ್ಕಂತೆ ಇವನು ಧರ್ಮಾತ್ಮನೂ ಸತ್ಯಸಂಧನೂ ಪರಮಸಾತ್ತ್ವಿಕನೂ, ವಿಷ್ಣುಭಕ್ತನೂ ಆಗಿದ್ದ ಮಹಾತ್ಮ. ಧರ್ಮದೇವತೆಯ ಅನುಗ್ರಹದಿಂದ ಪಾಂಡುರಾಜನಿಗೆ ಕುಂತಿಯಲ್ಲಿ ಜನಿಸಿದ **ಜ್ಯೇಷ್ಠಪುತ್ರ**ನಿವನು.

೨. **ಭೀಮಸೇನ:** ಹೆಸರಿಗೆ ತಕ್ಕಂತೆ ರೂಪದಲ್ಲಿಯೂ ಶೌರ್ಯದಲ್ಲಿಯೂ ಸ್ವಭಾವದಲ್ಲಿಯೂ ಪರಾಕ್ರಮಶಾಲಿ. ವಾಯುವಿನ ಅಂಶಸಂಭೂತನಾಗಿ, ಹನುಮಂತನ ತಮ್ಮನಾಗಿ, ಕ್ಷಾತ್ರತೇಜಸ್ಸಿನ **ದ್ವಿತೀಯಸುಪುತ್ರ**ನಿವನು.

೩. **ಅರ್ಜುನ:** ಇವನು ಶುದ್ಧಾಂತಃಕರಣಿ, ಶ್ರೀಕೃಷ್ಣಭಗವಂತನ ಪರಮಮಿತ್ರ, ದಾಸ, ಭಕ್ತ, ಶಿಷ್ಯ. ಶ್ರೀಮತ್ ಭಗವದ್ಗೀತೆಯನ್ನು ಶ್ರೀಕೃಷ್ಣನಿಂದ ಶ್ರವಣ ಮಾಡಿದ ಅದೃಷ್ಟವಂತ. ದೇವೇಂದ್ರನ ಅನುಗ್ರಹದಿಂದ ಹುಟ್ಟಿದ, ಸಕಲ ದೇವತೆಗಳ ಕೃಪಾನುಗ್ರಹಕ್ಕೆ ಪಾತ್ರನಾದ ಇವನು **ಮಧ್ಯಮಪಾಂಡವ**ನೆಂದೇ ಪ್ರಸಿದ್ಧನಾದ ವೀರಾಗ್ರಣಿ. ಕುಂತಿಯ **ತೃತೀಯ ಪುತ್ರ.**

೪. **ನಕುಲ ಮತ್ತು ೫. ಸಹದೇವರು:** ಇವರಿಬ್ಬರೂ ಪಾಂಡುರಾಜನಿಂದ ಮಾದ್ರಿಯಲ್ಲಿ ಹುಟ್ಟಿದ ಯಮಳರು ಎಂದರೆ ಅವಳಿ ಮಕ್ಕಳುಗಳು. ಅಶ್ವಿನೀದೇವತೆಗಳ ಕೃಪಾನುಗ್ರಹದಿಂದ ಹುಟ್ಟಿರುವ, ಆರೋಗ್ಯವಂತರಾದ ಪರಮಸಾತ್ತ್ವಿಕರಾದ ಇವರಿಬ್ಬರೂ ಯಾವಾಗಲೂ ಜೊತೆಜೊತೆಯಾಗಿಯೇ ಇರುತ್ತಾರೆ.

ಪ್ರತಿದಿನವೂ ಬೆಳಗ್ಗೆ ಏಳುತ್ತಲೇ ಈ **ಪಂಚಪಾಂಡವ**ರನ್ನೂ ಅವರ ಸದ್ಗುಣಗಳನ್ನೂ ಮಾನವರು ಸ್ಮರಿಸಬೇಕೆಂದು ನಮ್ಮ ಹಿಂದಿನವರು ಹೇಳಿರುತ್ತಾರೆ. ಏಕೆಂದರೆ ಈ ಪಂಚ ಪಾಂಡವರ ಸ್ಮರಣೆಯಿಂದಲೇ ಪಾಪಗಳು ನಾಶವಾಗುತ್ತವೆ. ಈ ಮೇಲಿನ ಶ್ಲೋಕದಲ್ಲಿ ಈ ಪಂಚಪಾಂಡವರನ್ನು ಸಂಗ್ರಹಿಸಿ ಹೇಳಿದೆ. ಕರ್ಣನನ್ನು ಪಂಚಪಾಂಡವರ ಪಟ್ಟಿಯಲ್ಲಿ ಸೇರಿಸಿಲ್ಲ, ನೆನಪಿರಲಿ.

4. ಹತ್ತು ಮಕಾರಗಳು ಚಂಚಲ

ಮಕಾರದಿಂದ ಪ್ರಾರಂಭಗೊಳ್ಳುವ **ಹತ್ತು** ಪದಾರ್ಥಗಳು ಚಂಚಲ ವಾಗಿರುತ್ತವೆ. ಅವುಗಳಾವುವೆಂದರೆ:

ಮನೋ ಮಧುಕರೋ ಮೇಘೋ ಮಾನಿನೀ ಮದನೋ ಮರುತ್।
ಮಾ ಮದೋ ಮರ್ಕಟೋ ಮತ್ಸ್ಯಃ "ಮಕಾರಾ ದಶ ಚಂಚಲಾಃ"॥

೧. **ಮನಃ** ಎಂದರೆ ಮನಸ್ಸು. ಒಂದು ಕ್ಷಣದಲ್ಲಿ ಇದ್ದ ಮನಸ್ಸು ಇನ್ನೊಂದು ಕ್ಷಣದಲ್ಲಿ ನಿಲ್ಲದೇ ಬದಲಾವಣೆಯಾಗುತ್ತಾ ಅತ್ಯಂತ ಚಂಚಲವಾಗಿರುತ್ತದೆಯಲ್ಲವೇ?

೨. **ಮಧುಕರಃ** ಎಂದರೆ ಜೇನುನೊಣ. ಒಂದು ನಿಮಿಷವೂ ಒಂದು ಕಡೆ ಕೂರದೇ, ಸದಾ ಜೇನುನೊಣವು ಹಾರಾಡುತ್ತಾ ಇರುತ್ತದೆಯಲ್ಲವೇ?

೩. **ಮೇಘಃ** ಎಂದರೆ ಮೋಡ. ಮೋಡವು ಕ್ಷಣಕ್ಷಣಕ್ಕೂ ಸಂಚರಿಸುತ್ತಾ ಇರುತ್ತದೆಯಲ್ಲವೇ? ಉದ್ದುದ್ದಕ್ಕೂ ಅಡ್ಡಗಲಕ್ಕೂ ಚಲಿಸುತ್ತಿರುತ್ತದೆ.

೪. **ಮಾನಿನೀ** ಎಂದರೆ ಸ್ತ್ರೀಯರು. ಇವರಿಗೆ ಚಂಚಲೆಯರೆಂದೇ ಹೆಸರಿದೆ.

೫. **ಮದನಃ** ಎಂದರೆ ಕಾಮ. ಮನುಷ್ಯರ ಕಾಮಗಳು ಕ್ಷಣಿಕವಾಗಿದ್ದು ಅತ್ಯಂತ ಚಂಚಲವೆಂದು ಪ್ರಸಿದ್ಧವಾಗಿರುತ್ತದೆಯಲ್ಲವೇ?

೬. **ಮರುತ್‌** ಎಂದರೆ ಗಾಳಿ. ಗಾಳಿಯು ನಿಂತಲ್ಲಿ ನಿಲ್ಲದೇ, ಒಂದೇ ಸಮನೆ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಚಲಿಸುತ್ತಾ ಇರುತ್ತದೆಯಲ್ಲವೇ?

೭. **ಮಾಃ** ಎಂದರೆ ಲಕ್ಷ್ಮೀ. ಹಣವಂತೂ ಒಬ್ಬರಿಂದ ಮತ್ತೊಬ್ಬರಿಗೆ, ಅವರಿಂದ ಇನ್ನೊಬ್ಬರಿಗೆ ಹೋಗಿಸೇರುತ್ತಾ ಅತ್ಯಂತ ಚಂಚಲವಾಗಿರುತ್ತದೆಯಲ್ಲವೇ?

೮. **ಮದಃ** ಎಂದರೆ ಗರ್ವ, ಅಭಿಮಾನ. ಅಧಿಕಾರಮದ, ಸೌಂದರ್ಯದ ಮದ ಇತ್ಯಾದಿಗಳೆಲ್ಲವೂ ಕ್ಷಣಿಕವೆಂದೇ ನಮಗೆಲ್ಲ ತಿಳಿದಿದೆಯಲ್ಲವೇ?

೯. **ಮರ್ಕಟಃ** ಎಂದರೆ ಕೋತಿ. ಕಪಿಯಂತೂ ಚಾಂಚಲ್ಯಕ್ಕೆ ಪ್ರಸಿದ್ಧ. ಕಪಿಚೇಷ್ಟೆ ಎಂದೇ ಹೇಳುತ್ತಾರಲ್ಲವೇ? ಕಪಿಯೂ ಚಂಚಲ.

೧೦. **ಮತ್ಸ್ಯಃ** ಎಂದರೆ ಮೀನು. ನೀರಿನಲ್ಲಿರುವ ಮೀನುಗಳಂತೂ ಸುಮ್ಮನೇ ಓಡಾಡುತ್ತಲೇ ಇರುತ್ತಾ ಅತ್ಯಂತ ಚಂಚಲವೇ ಆಗಿರುತ್ತವೆ.

5. ಆರು ಕಾರಕಾರ್ಥ ವಿಭಕ್ತಿಗಳು

ಸಂಸ್ಕೃತ ವ್ಯಾಕರಣದಲ್ಲಿ ನಾಮಪದಗಳಿಗೆ **ಸುಬಂತ**ರೂಪಗಳು ಎಂದು ಹೆಸರು. ಈ ನಾಮಪದಗಳಿಗೆ ಏಳು ವಿಭಕ್ತಿಗಳಿರುತ್ತವೆ. ಷಷ್ಠೀ ವಿಭಕ್ತಿಯೊಂದನ್ನು ಬಿಟ್ಟು ಉಳಿದ ಆರೂ ವಿಭಕ್ತಿಗಳಿಗೆ **ಆರು** ಕಾರಕಾರ್ಥಗಳಿರುತ್ತವೆ. ಈ ಆರನ್ನೂ ಸೇರಿಸಿ ಈ ಕೆಳಗಿನ ಶ್ಲೋಕವು ರಚಿತವಾಗಿರುತ್ತದೆ:

ಕರ್ತಾ ಚ ಕರ್ಮ ಕರಣಂ ಸಂಪ್ರದಾನಂ ತಥೈವ ಚ।
ಅಪಾದಾನಾಧಿಕರಣೇ ಇತಿ "ಷಟ್ ಕಾರಕಾಣಿ" ವೈ॥

ಅರ್ಥಕ್ಕನುಗುಣವಾಗಿ **ಆರು ಕಾರಕ**ಗಳಿರುತ್ತವೆ.

೧. **ಕರ್ತೃಕಾರಕ:** ಕ್ರಿಯೆಯನ್ನು ಮಾಡುವವನೇ **ಕರ್ತೃಕಾರಕ**. **ರಾಮಃ** ರಾಮಾಯಣಂ ಪಠತಿ, **ಅಹಂ** ಪೂಜಾಂ ಕರೋಮಿ, **ತ್ವಂ** ಮಹಾಭಾರತಂ ಪಠಸಿ ಇತ್ಯಾದಿ ವಾಕ್ಯಗಳಲ್ಲಿ **ರಾಮಃ, ಅಹಂ, ತ್ವಂ** ಇವುಗಳಿಗೆ **ಕರ್ತೃ ಕಾರಕ ವಿಭಕ್ತಿ**ಗಳು ಎಂದು ಹೆಸರು.

೨. **ಕರ್ಮಕಾರಕ:** ಕ್ರಿಯೆಗೆ ವಿಷಯವಾದದ್ದು **ಕರ್ಮಕಾರಕ**. ರಾಮಾಯಣಂ, ಪೂಜಾಂ, ಮಹಾಭಾರತಂ—ಇವುಗಳು ಕರ್ಮಕಾರಕಗಳು.

೩. **ಕರಣಕಾರಕ:** ಬಾಲಃ **ಪಾದಾಭ್ಯಾಂ** ಗಚ್ಛತಿ, ಅಹಂ **ಚಕ್ಷುರ್ಭ್ಯಾಂ** ಪಶ್ಯಾಮಿ; ಇಲ್ಲಿ ಕಾಲುಗಳಿಂದ, ಕಣ್ಣುಗಳಿಂದ ಎಂಬುದು ಕರಣಾರ್ಥದ **ಕರಣಕಾರಕವಿಭಕ್ತಿ**.

೪. **ಸಂಪ್ರದಾನಕಾರಕ:** ಅಹಂ **ಬಾಲಕಾಯ** ಫಲಂ ಯಚ್ಛಾಮಿ; ಇಲ್ಲಿ ಹುಡುಗನಿಗೆ ಎಂಬುದು **ಸಂಪ್ರದಾನಾರ್ಥಕಚತುರ್ಥೀವಿಭಕ್ತಿ**.

೫. **ಅಪಾದಾನಕಾರಕ:** ಎಂದರೆ ಅದರ ದೆಸೆಯಿಂದ ಎಂದರ್ಥ. **ವೃಕ್ಷಾತ್** ಫಲಾನಿ ಪತಂತಿ ಎಂಬಲ್ಲಿ ವೃಕ್ಷಾತ್ ಎಂಬುದು **ಅಪಾದಾನಕಾರಕಾರ್ಥ ವಿಭಕ್ತಿ**. ಮರದ ದೆಸೆಯಿಂದ ಹಣ್ಣು ಬೀಳುತ್ತದೆ ಎಂದರ್ಥ.

೬. **ಅಧಿಕರಣಕಾರಕ:** **ಗೃಹೇ** ಪುಸ್ತಕಾನಿ ಸಂತಿ ಎನ್ನುವಾಗ ಮನೆಯಲ್ಲಿ ಎಂಬುದು **ಅಧಿಕರಣಾರ್ಥಕ ಸಪ್ತಮೀವಿಭಕ್ತಿ**ಯಾಗುತ್ತದೆ.

ಹೀಗೆ ಅರ್ಥವನ್ನು ನೋಡಿಕೊಂಡು ಕಾರಕಗಳನ್ನು ತಿಳಿದುಕೊಳ್ಳಬೇಕು.

6. ಐದು ಅತ್ಯಂತ ಪವಿತ್ರವಾದ ವಸ್ತುಗಳು

ಈ ಕೆಳಗಿನ **ಐದು** ವಸ್ತುಗಳು ಅತ್ಯಂತ ಪವಿತ್ರವಾದವುಗಳು.

ಉಚ್ಛಿಷ್ಟಂ ಶಿವನಿರ್ಮಾಲ್ಯಂ ವಮನಂ ಶವಕರ್ಪಟಮ್ ।
ಕಾಕವಿಷ್ಠಾಸಮುತ್ಪನ್ನಂ "ಪಂಚೈತೇಽತಿಪವಿತ್ರಕಾಃ" ॥

ಉಚ್ಛಿಷ್ಟಂ ಎಂದರೆ ಎಂಜಲು; ಆದರೂ ಇದು ಅತ್ಯಂತ ಪವಿತ್ರವಾದದ್ದು. ಇದು ಹೇಗೆಂದರೆ: ಹಸುವಿನ ಹಾಲು, ಕರುವಿನ ಎಂಜಲಲ್ಲವೇ? ಕರುವು ಕುಡಿದು ಉಳಿದ ಹಾಲನ್ನು ನಾವುಗಳು ಅಭಿಷೇಕಕ್ಕೆ, ನೈವೇದ್ಯಕ್ಕೆ, ಪಂಚಾಮೃತಕ್ಕೆ, ಪಂಚಗವ್ಯ ಪ್ರಾಯಶ್ಚಿತ್ತಕ್ಕೆ ಅತ್ಯಂತ ಪವಿತ್ರವೆಂದು ಬಳಸುತ್ತೇವಲ್ಲವೇ?

ಶಿವನಿರ್ಮಾಲ್ಯಂ ಎಂದರೆ ಶಿವನ ನಿರ್ಮಾಲ್ಯ. ಶಿವನಿಂದ ಉಪಯೋಗಿಸಲ್ಪಟ್ಟು ಅವನಿಂದ ಅಂದರೆ ಶಿವನ ಜಟೆಯಿಂದ ಹೊರಕ್ಕೆ ಬಂದಂಥ ಗಂಗಾನದಿಯು ಶಿವನ ನಿರ್ಮಾಲ್ಯವಲ್ಲವೇ? ಆದರೂ ಗಂಗಾನದಿಯು ಅತ್ಯಂತ ಪವಿತ್ರವೆಂದೇ ವೇದಶಾಸ್ತ್ರಪುರಾಣಗಳು ಸಾರುತ್ತಿವೆಯಲ್ಲವೇ?

ವಮನಂ ಎಂದರೆ ವಾಂತಿ. ವಾಂತಿಯೆಂಬುದು ಅತ್ಯಂತ ಅಸಹ್ಯವಾದದ್ದು. ಆದರೂ ಈ ವಾಂತಿರೂಪವಾದ ವಸ್ತುವು ಪವಿತ್ರವೇ ಆಗಿರುತ್ತದೆ. ಹೇಗೆಂದರೆ: ಜೇನುಹುಳುಗಳು ಪುಷ್ಪಗಳಿಂದ ಮಕರಂದವನ್ನು ಹೀರಿ, ಕುಡಿದು, ಅನಂತರ ಆ ಮಕರಂದವನ್ನೇ ಜೇನಿನ ಹುಟ್ಟಿನಲ್ಲಿ ಸಂಗ್ರಹಿಸಿ ಇಡುತ್ತವೆ. ಹೀಗಾಗಿ ಜೇನುತುಪ್ಪವು ಜೇನುನೊಣಗಳ ವಾಂತಿಯೇ ಆದರೂ, ಜೇನುತುಪ್ಪವು ಅತ್ಯಂತ ಪವಿತ್ರವೆಂದೇ ಲೋಕದಲ್ಲೂ ವೇದಗಳಲ್ಲೂ ಪ್ರಸಿದ್ಧವಾಗಿರುತ್ತದೆಯಲ್ಲವೇ?

ಶವಕರ್ಪಟಂ ಎಂದರೆ ಶವದಿಂದ ತಯಾರಾದ ಬಟ್ಟೆ ಎಂದರ್ಥ; ರೇಷ್ಮೆಸೀರೆ, ರೇಷ್ಮೆ ಮಗುಟಗಳು ರೇಷ್ಮೆಹುಳುಗಳನ್ನು ಸಾಯಿಸಿ, ಅವುಗಳಿಂದ ಸಿದ್ಧವಾದ ಪದಾರ್ಥಗಳು. ಆದರೂ ಅತ್ಯಂತ ಪವಿತ್ರವಲ್ಲವೇ?

ಕಾಕವಿಷ್ಠಾಸಮುತ್ಪನ್ನಂ ಎಂದರೆ ಕಾಗೆಯ ಮಲದ ಮೂಲಕ ಹುಟ್ಟಿದ ವೃಕ್ಷ; ಅರಳಿಮರ. ಇದು ಅತ್ಯಂತ ಪವಿತ್ರವಲ್ಲವೇ? ಅರಳಿಮರದ ಬೀಜವನ್ನು ಕಾಗೆಯು ತಿಂದು, ಆ ಬೀಜವು ಕಾಗೆಯ ಮಲದೊಂದಿಗೆ ಎಲ್ಲಿಯೋ ಬಿದ್ದಾಗ ಅದರಿಂದ ಅಶ್ವತ್ಥವೃಕ್ಷವು ಹುಟ್ಟುತ್ತದೆಯಂತೆ. ಈ ವೃಕ್ಷವಂತೂ ಪವಿತ್ರ.

ಒಂದೇ ಶ್ಲೋಕದಲ್ಲಿ ಈ ಐದನ್ನೂ ಸೇರಿಸಿ ಹೇಳಿರುವುದೇ ವಿಶೇಷ.

7. ಪಂಚ ವಿಷಯಗಳು

ಈ ವಿಶಾಲಪ್ರಪಂಚದಲ್ಲಿ ಅನೇಕ ವಸ್ತುಗಳಿರುತ್ತವೆ. ಇವುಗಳನ್ನೆಲ್ಲ ಒಟ್ಟುಗೂಡಿಸಿ **ಪಂಚ ವಿಷಯ**ಗಳನ್ನಾಗಿ ವಿಂಗಡಿಸಬಹುದು. ಇವುಗಳನ್ನು ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಂದು ತಿಳಿಯಬೇಕು. ಈ ಐದನ್ನು ಬಿಟ್ಟು ಇವುಗಳಿಗಿಂತ ಭಿನ್ನವಾಗಿ ಆರನೆಯ ವಿಷಯವೇ ಇಲ್ಲ ಎನ್ನಬಹುದು.

ಶಬ್ದಸ್ಪರ್ಶೌ ತಥಾ ರೂಪಂ ರಸೋ ಗಂಧಸ್ತಥೈವ ಚ।
ಪಂಚಜ್ಞಾನೇಂದ್ರಿಯಾಣಾಂ ಹಿ "ಪಂಚೈತೇ ವಿಷಯಾಃ ಸ್ಮೃತಾಃ"॥

೧. **ಶಬ್ದ** ಎಂದರೆ ಕಿವಿಗಳಿಗೆ ವಿಷಯವಾದ ಪದಾರ್ಥ. ಇದಕ್ಕೇ ಪದ, ನಾಮ, ವಾಚಕ, ಅಕ್ಷರ, ಅಭಿಧಾನ ಎಂದೆಲ್ಲಾ ಹೆಸರುಗಳು. ಎಲ್ಲಾ ಶಬ್ದಗಳನ್ನೂ ಗ್ರಹಿಸುವ ಏಕೈಕ ಇಂದ್ರಿಯ ಎಂದರೆ ಶ್ರೋತ್ರೇಂದ್ರಿಯ.

೨. **ಸ್ಪರ್ಶ** ಎಂದರೆ ಚರ್ಮೇಂದ್ರಿಯಕ್ಕೆ ವಿಷಯವಾದ ವಸ್ತು. ಮೃದು, ಒರಟು, ಬಿಸಿ, ಶೈತ್ಯ ಮುಂತಾದವುಗಳೆಲ್ಲವೂ ಸ್ಪರ್ಶವೇ ಆಗಿರುತ್ತವೆ.

೩. **ರೂಪ** ಎಂದರೆ ವಸ್ತುಗಳ ಬಾಹ್ಯಗುಣ. ಕಪ್ಪು, ಕೆಂಪು, ಬಿಳಿ, ಹಳದಿ, ಹಸಿರು, ಉದ್ದ, ಅಗಲ, ದಪ್ಪ ಮುಂತಾದವೆಲ್ಲವೂ ರೂಪಗಳೇ. ಇವುಗಳನ್ನು ಗ್ರಹಿಸುವ ಏಕೈಕ ಇಂದ್ರಿಯವೆಂದರೆ ನೇತ್ರೇಂದ್ರಿಯ.

೪. **ರಸ** ಎಂದರೆ ರುಚಿ. ಹುಳಿ, ಸಿಹಿ, ಖಾರ, ಉಪ್ಪು, ಒಗರು ಮುಂತಾದವುಗಳು. ರಸಗಳನ್ನು ಅರಿಯುವ ಇಂದ್ರಿಯವೆಂದರೆ ರಸನೇಂದ್ರಿಯ.

೫. **ಗಂಧ** ಎಂದರೆ ವಾಸನೆ. ಈರುಳ್ಳಿ ವಾಸನೆ, ಕೋಸಿನ ವಾಸನೆ, ಬೋಂಡದ ವಾಸನೆ, ಕಾಫಿ ವಾಸನೆ, ಒಗ್ಗರಣೆ ವಾಸನೆ ಇತ್ಯಾದಿಗಳು. ವಾಸನೆಗಳನ್ನು ಮೂಗು ಅರಿಯುತ್ತದೆ. ಘ್ರಾಣೇಂದ್ರಿಯದಿಂದಲೇ ಗಂಧದ ಗ್ರಹಣವಾಗುತ್ತದೆ.

ಹೀಗೆ ಜ್ಞಾನೇಂದ್ರಿಯಗಳು ಐದು; ಪಂಚ ಜ್ಞಾನೇಂದ್ರಿಯಗಳಿಗೆ ಶಬ್ದಾದಿ ವಿಷಯಗಳೂ ಐದು. ಇಡೀ ವಿಶ್ವದಲ್ಲಿರುವ ಸಕಲ ವಸ್ತುಗಳನ್ನೂ ಐದು ಇಂದ್ರಿಯಗಳಿಂದಲೇ ನಾವು ತಿಳಿಯುತ್ತೇವಲ್ಲವೇ? ಪಂಚ ವಿಷಯಗಳನ್ನು ಬಿಟ್ಟು ಆರನೆಯ ವಿಷಯ ಎಂಬುದು ಇಲ್ಲವೆಂದು ತಿಳಿಯಬೇಕು. ಆದರೆ ವೇದಾಂತ ಪ್ರತಿಪಾದ್ಯವಾದ ಪರಬ್ರಹ್ಮವು ವಿಷಯವೇ ಅಲ್ಲವಾದ್ದರಿಂದ ಅದನ್ನು ಯಾವ ಪ್ರಮಾಣಗಳಿಂದಲೂ ಅರಿಯಲು ಸಾಧ್ಯವಿಲ್ಲ.

8. ಸಪ್ತ ಮಾತೃಕಾದೇವತೆಯರು

ಪುರುಷದೇವರುಗಳನ್ನು ಆರಾಧಿಸುವಂತೆಯೇ ಸ್ತ್ರೀದೇವತೆಗಳನ್ನೂ ಆರಾಧಿಸುವ ಸಂಪ್ರದಾಯವು ನಮ್ಮಲ್ಲಿದೆ. ಉದಾಹರಣೆಗೆ: ನವಗ್ರಹಗಳು, ಶ್ರೀನಿವಾಸ, ಶ್ರೀಕೃಷ್ಣ, ಶ್ರೀರಾಮ, ಆಂಜನೇಯ, ಗಣಪತಿ, ನರಸಿಂಹ, ಈಶ್ವರ, ಸುಬ್ರಹ್ಮಣ್ಯ, ಪಾಂಡುರಂಗ, ಮೃತ್ಯುಂಜಯ—ಮುಂತಾದ ಪುರುಷ ದೇವರುಗಳನ್ನು ಆರಾಧಿಸುತ್ತೇವಲ್ಲವೇ? ಅದರಂತೆಯೇ ಲಲಿತಾ, ಗಾಯತ್ರೀ, ಸಾವಿತ್ರೀ, ಚಾಮುಂಡಾ, ಲಕ್ಷ್ಮೀ, ಗೌರೀ, ಸರಸ್ವತೀ, ದುರ್ಗಾ, ಶಾರದಾ—ಮುಂತಾದ ಸ್ತ್ರೀದೇವತೆಯರನ್ನೂ ಆರಾಧಿಸುವ ಸಂಪ್ರದಾಯವು ನಮ್ಮಲ್ಲಿ ಇದೆ.

ಹೀಗೆಯೇ ಸಪ್ತಮಾತೃಕಾದೇವತೆಯರನ್ನು ನಾವುಗಳು ಆರಾಧಿಸುತ್ತೇವೆ.

ಆ ಸಪ್ತಮಾತೃಕೆಯರ ಪಟ್ಟಿಯನ್ನು ಈ ಶ್ಲೋಕದಲ್ಲಿ ಸಂಗ್ರಹಿಸಲಾಗಿದೆ:

ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ।
ವಾರಾಹೀ ಚ ತಥೇಂದ್ರಾಣೀ ಚಾಮುಂಡಾ "ಸಪ್ತ ಮಾತರಃ"॥

೧. **ಬ್ರಾಹ್ಮೀ** : ಬ್ರಹ್ಮನ ಅಂಶವುಳ್ಳ, ಬ್ರಹ್ಮನ ಪತ್ನಿಯಾದ ದೇವತೆ.

೨. **ಮಾಹೇಶ್ವರೀ**: ಮಹೇಶ್ವರನ ಅಂಶವುಳ್ಳ ಸಂಹಾರಶಕ್ತಿದೇವತೆ.

೩. **ಕೌಮಾರೀ** : ಕುಮಾರಸ್ವಾಮಿಯ ಅಂಶವುಳ್ಳ ಜ್ಞಾನದೇವತೆ.

೪. **ವೈಷ್ಣವೀ** : ಮಹಾವಿಷ್ಣುವಿನ ಶಕ್ತಿಯುಳ್ಳ ಸ್ಥಿತಿಕಾರಕದೇವತೆ.

೫. **ವಾರಾಹೀ** : ವರಾಹಸ್ವಾಮಿಯ ಅಂಶವುಳ್ಳ ದೇವತೆ.

೬. **ಇಂದ್ರಾಣೀ** : ಇಂದ್ರನ ಅಂಶವುಳ್ಳ ಶಕ್ತಿದೇವತೆ.

೭. **ಚಾಮುಂಡಾ** : ಚಂಡಮುಂಡಾಸುರರನ್ನು ಸಂಹರಿಸಿದ ಶಕ್ತಿದೇವತೆ.

ಈ ಏಳೂ ಶಕ್ತಿದೇವತೆಗಳನ್ನು **ಗಣದೇವತೆ**ಗಳೆಂದು ಕರೆಯುತ್ತಾರೆ. **ಸಪ್ತ ಮಾತೃಕಾದೇವತೆ**ಗಳೆಂದರೆ ಇವರೆಲ್ಲರೂ ಮಾತೃಸ್ವರೂಪಿಣಿಯಾಗಿರುವ ದೇವತೆಗಳು ಎಂದರ್ಥ. ರಾಜಮಹಾರಾಜರುಗಳು ನವರಾತ್ರಮಹೋತ್ಸವದಲ್ಲಿ ಈ ಸಪ್ತಮಾತೃಕಾಶಕ್ತಿದೇವತೆಯರನ್ನು ವಿಶೇಷವಾಗಿ ಆರಾಧಿಸುತ್ತಾರೆ. ಶೀಘ್ರಫಲ ಪ್ರಾಪ್ತಿಗಾಗಿ, ಶತ್ರುಸಂಹಾರಕ್ಕಾಗಿ, ವಿಜಯಸ್ಥಾಪನೆಗಾಗಿ ಶಕ್ತಿ ಆರಾಧಕರು ಸಪ್ತಮಾತೃಕೆಯರನ್ನು ಆರಾಧಿಸುತ್ತಾರೆ. ಇವರ ಆರಾಧನೆಯಿಂದ ನಮಗೆ ಸಕಲ ಸಂಪತ್ತುಗಳೂ ದೊರಕುವುದರಲ್ಲಿ ಸಂಶಯವಿಲ್ಲ.

9. ದಶ ಉಪನಿಷತ್ತುಗಳು

ಬ್ರಹ್ಮವಿದ್ಯೆಯನ್ನು ಉಪದೇಶಿಸುವ ವೇದಾಂತಗ್ರಂಥಗಳಿಗೆ **ಉಪನಿಷತ್ತುಗಳು** ಎಂದು ಹೆಸರು. ಈ ಉಪನಿಷತ್ತುಗಳ ದರ್ಶನಕ್ಕೆ **ವೇದಾಂತದರ್ಶನ** ಎಂದೂ ಹೆಸರು. ವೇದಗಳ ಕಡೆಯ ಭಾಗವಾದ, ವೇದಗಳ ತಾತ್ಪರ್ಯವಾದ ಭಾಗಗಳಿಗೇ **ವೇದಾಂತಗಳು** ಎಂದೂ ಹೆಸರು. ಅಂತೂ **ವೇದಾಂತ**ಗಳೆಂದರೂ **ಉಪನಿಷತ್ತು**ಗಳೆಂದರೂ ಒಂದೇ ಎಂದು ತಿಳಿಯಬೇಕು. ಉಪನಿಷತ್ತುಗಳಲ್ಲಿ ಜಗತ್ತಿನ ಸೃಷ್ಟಿವಿಚಾರವನ್ನೂ, ಬ್ರಹ್ಮಸ್ವರೂಪವನ್ನೂ, ಬ್ರಹ್ಮವಿದ್ಯಾಸ್ವರೂಪವನ್ನೂ, ಮೋಕ್ಷಸ್ವರೂಪವನ್ನೂ ಪ್ರಧಾನವಾಗಿ ತಿಳಿಸಲಾಗಿದೆ.

ಇಂಥ ಉಪನಿಷತ್ತುಗಳು ಪ್ರಧಾನವಾಗಿ **ಹತ್ತು** ಎಂದು ನಿರ್ಣಯಿಸಿರುತ್ತಾರೆ. ಆ ಹತ್ತು ಉಪನಿಷತ್ತುಗಳನ್ನು ಈ ಕೆಳಗಿನ ಶ್ಲೋಕದಲ್ಲಿ ಸಂಗ್ರಹಿಸಲಾಗಿದೆ:

ಈಶ ಕೇನ ಕಠ ಪ್ರಶ್ನ ಮುಂಡ ಮಾಂಡೂಕ್ಯ ತಿತ್ತಿರಿಃ।
ಐತರೇಯಂ ಚ ಛಾಂದೋಗ್ಯಂ ಬೃಹದಾರಣ್ಯಕಂ "ದಶ"॥

೧. **ಈಶಾವಾಸ್ಯೋಪನಿಷತ್** : ಶುಕ್ಲಯಜುರ್ವೇದ ಸಂಹಿತೆಗೆ ಸೇರಿದೆ.

೨. **ಕೇನೋಪನಿಷತ್** : ಸಾಮವೇದದ ತಲವಕಾರಶಾಖೆಗೆ ಸೇರಿದೆ.

೩. **ಕಾಠಕೋಪನಿಷತ್** : ಕೃಷ್ಣಯಜುರ್ವೇದದ ಕಾಠಕಶಾಖೆಗೆ ಸೇರಿದೆ.

೪. **ಪ್ರಶ್ನೋಪನಿಷತ್** : ಅಥರ್ವವೇದದ ಬ್ರಾಹ್ಮಣಭಾಗಕ್ಕೆ ಸೇರಿದೆ.

೫. **ಮುಂಡಕೋಪನಿಷತ್** : ಅಥರ್ವವೇದದ ಮಂತ್ರಭಾಗಕ್ಕೆ ಸೇರಿದೆ.

೬. **ಮಾಂಡೂಕ್ಯೋಪನಿಷತ್**: ಅಥರ್ವವೇದದ ಮಂತ್ರಭಾಗಕ್ಕೆ ಸೇರಿದೆ.

೭. **ತೈತ್ತಿರೀಯೋಪನಿಷತ್** : ಕೃಷ್ಣಯಜುರ್ವೇದದ ಆರಣ್ಯಕಕ್ಕೆ ಸೇರಿದೆ.

೮. **ಐತರೇಯೋಪನಿಷತ್** : ಋಗ್ವೇದದ ಬ್ರಾಹ್ಮಣಕ್ಕೆ ಸೇರಿರುತ್ತದೆ.

೯. **ಛಾಂದೋಗ್ಯೋಪನಿಷತ್**: ಸಾಮವೇದದ ತಾಂಡ್ಯಶಾಖೆಗೆ ಸೇರಿದ್ದು.

೧೦. **ಬೃಹದಾರಣ್ಯಕೋಪನಿಷತ್**: ಶುಕ್ಲಯಜುರ್ವೇದದ ಶತಪಥಬ್ರಾಹ್ಮಣಕ್ಕೆ ಸೇರಿದೆ. ಹೆಸರಿಗೆ ತಕ್ಕಂತೆ ಇದು ದೊಡ್ಡ ಉಪನಿಷತ್ತು.

ಈ **ಹತ್ತೂ** ಉಪನಿಷತ್ತುಗಳಿಗೆ ವೇದಾಂತಗಳು ಎಂದೇ ಹೆಸರು. ಇವುಗಳಿಗೆ ಭಗವತ್ಪಾದ ಶ್ರೀಶಂಕರರು ತಮ್ಮ ವಿಸ್ತಾರವಾದ ಭಾಷ್ಯಗಳನ್ನು ಬರೆದಿರುತ್ತಾರೆ. ಇವುಗಳಿಗೇ **ಶ್ರುತಿಪ್ರಸ್ಥಾನ**ವೆಂದೂ **ಸಿದ್ಧಾಂತಪ್ರಸ್ಥಾನ**ವೆಂದೂ ಹೆಸರುಗಳು.

10. ನವ 'ಕವಿರತ್ನ'ಗಳು

ಭಾರತದೇಶದ ಸಂಪತ್ತು ಎಂದರೆ ವೇದವೇದಾಂತವೇದಾಂಗ ಇತಿಹಾಸ ಪುರಾಣ ಧರ್ಮಶಾಸ್ತ್ರಗಳು. ಇವೆಲ್ಲವೂ ಸಂಸ್ಕೃತ ಭಾಷೆಯಲ್ಲಿಯೇ ಇರುತ್ತವೆ. ಸಂಸ್ಕೃತಭಾಷೆ ಎಂದರೆ: ಇದು ದೇವಭಾಷೆ, ವೇದಭಾಷೆ, ಅಮರಭಾಷೆ, ಅಮೃತಭಾಷೆ. ಸಂಸ್ಕೃತಭಾಷೆಯಲ್ಲಿ ಸಕಲಶಾಸ್ತ್ರಗಳೂ, ಕಲೆಗಳೂ, ವಿದ್ಯೆಗಳೂ ತುಂಬಿರುತ್ತವೆ. ಈ ಸಂಸ್ಕೃತಭಾಷೆಯು ಕೇವಲ ಭಾರತೀಯ ಭಾಷೆ ಮಾತ್ರ ವಲ್ಲ; ಮತ್ತೇನೆಂದರೆ, ವಿಶ್ವಭಾಷೆ, ಸನಾತನ ಧರ್ಮದ ಸನಾತನ ಭಾಷೆಯಿದು!

ಭಾಷೆ ಎಂದರೆ ಮಾತು; ಮಾತು ಎಂಬುದು ಅಚೇತನವಸ್ತು. ಭಾಷೆಯು ತಾನೇ ಬದುಕಿರಲಾರದು. ಈ ಭಾಷೆಯ ಉಳಿವಿಗಾಗಿ, ಅಭಿವೃದ್ಧಿಗಾಗಿ ಅನೇಕ ತಪಸ್ವಿಗಳು ಶ್ರಮಿಸಿದ್ದಾರೆ. ಇವರಲ್ಲಿ ಕವಿಗಳ ಪಾತ್ರವು ಅದ್ಭುತವಾದದ್ದು. ವಿಕ್ರಮಾದಿತ್ಯರಾಜನ ಆಸ್ಥಾನದಲ್ಲಿ "ನವ ಕವಿರತ್ನ"ಗಳಿದ್ದರಂತೆ. ಹಾಗೆಂದು ಹೇಳುವ ಈ ಕೆಳಗಿನ ಪ್ರಸಿದ್ಧ ಶ್ಲೋಕವನ್ನು ನೋಡೋಣ:

ಧನ್ವಂತರಿ ಕ್ಷಪಣಕಾಮರಸಿಂಹ ಶಂಕು
ವೇತಾಳಭಟ್ಟ ಘಟಕರ್ಪರ ಕಾಳಿದಾಸಾಃ।
ಖ್ಯಾತೋ ವರಾಹಮಿಹಿರೋ ನೃಪತೇಃ ಸಭಾಯಾಂ
ರತ್ನಾನಿ ವೈ ವರರುಚಿ"ರ್ನವ ವಿಕ್ರಮಸ್ಯ"॥

ಈ ಒಂದು ಶ್ಲೋಕದಲ್ಲಿ **ನವ ಕವಿರತ್ನ**ಗಳನ್ನು ಹೆಣೆದಿದ್ದಾರೆ. ಅವರು ಯಾರೆಂದರೆ: ೧) ಧನ್ವಂತರಿ ೨) ಕ್ಷಪಣಕ ೩) ಅಮರಸಿಂಹ ೪) ಶಂಕು ೫) ವೇತಾಳಭಟ್ಟ ೬) ಘಟಕರ್ಪರ ೭) ಕಾಳಿದಾಸ ೮) ವರಾಹಮಿಹಿರ ೯) ವರರುಚಿ. ಇವರೆಲ್ಲ ವಿಕ್ರಮಾದಿತ್ಯರಾಜನ ಆಸ್ಥಾನದಲ್ಲಿದ್ದ ಮಹಾಕವಿಗಳು.

ಇಲ್ಲಿ ವಿಕ್ರಮಾದಿತ್ಯ ರಾಜನೆಂದರೆ ಭೋಜರಾಜನೇ. ಭೋಜರಾಜನು ಸ್ವತಃ ಕವಿಪುಂಗವನೂ ವಿದ್ವಾಂಸನೂ ಆಗಿದ್ದು **ರಾಮಾಯಣ ಚಂಪೂಃ** ಎಂಬ ಚಂಪೂ ಕಾವ್ಯವನ್ನು ಬರೆದಿದ್ದಾನೆ. ಆದ್ದರಿಂದಲೇ ಇವನ ಆಸ್ಥಾನದಲ್ಲಿ ಒಂಬತ್ತು ಕವಿಪುಂಗವರು ಮೆರೆಯುತ್ತಿದ್ದರು. ಇವರೆಲ್ಲರೂ ಕವಿಪುಂಗವರಾಗಿ ಅನೇಕ ಕಾವ್ಯ ನಾಟಕಗಳನ್ನು ಬರೆದಿರುತ್ತಾರೆ. ಆದರೆ ಇವರಲ್ಲಿ ಅಮರಸಿಂಹನ **ಅಮರ ಕೋಶವೂ**, ಕಾಳಿದಾಸನ ರಘುವಂಶ, ಕುಮಾರಸಂಭವ, ಮೇಘದೂತ ಕಾವ್ಯಗಳೂ, ಅಭಿಜ್ಞಾನ ಶಾಕುಂತಲ, ವಿಕ್ರಮೋರ್ವಶೀಯ ನಾಟಕಗಳೂ ಪ್ರಸಿದ್ಧ ವಾಗಿರುತ್ತವೆ. ವರರುಚಿಯ ವ್ಯಾಕರಣವಾರ್ತಿಕಗಳೂ ಸುಪ್ರಸಿದ್ಧವೇ ಆಗಿರುತ್ತವೆ. 'ಇರಲಿ, ಅಂತೂ ಈ ಶ್ಲೋಕದಲ್ಲಿ **ನವ ಕವಿರತ್ನ**ಗಳ ಪಟ್ಟಿಯಿರುತ್ತದೆ.

11. ಅಷ್ಟ ಸಿದ್ಧಿಗಳು

ಈ ಮಾನವನು ಪ್ರಚಂಡ ಹಾಗೂ ಅದ್ಭುತ! ಇವನು ಮನಸ್ಸುಮಾಡಿದ ನೆಂದರೆ ಏನನ್ನು ಬೇಕಾದರೂ ಸಾಧಿಸಬಲ್ಲ! ಇವನ ಸಾಮರ್ಥ್ಯ ಅದ್ಭುತ! ಇವನ ಶಕ್ತಿ ಅಪಾರ! ಇವನ ಸಂಕಲ್ಪವಂತೂ ಕಲ್ಪನಾತೀತವಾದದ್ದು! ಏಕೆಂದರೆ ಎಷ್ಟೇ ಆದರೂ ಇವನು ಭಗವಂತನ ಸತ್‌ಪುತ್ರನಲ್ಲವೇ? ಪರಮಾತ್ಮನ ಅಂಶವಾದ ಇವನಲ್ಲಿ ಭಗವಂತನ ಕೆಲವು ಶಕ್ತಿಗಳಾದರೂ ಇರಲೇಬೇಕಲ್ಲವೇ? ಹೌದು, ಇರಲೇಬೇಕು; ಅಲ್ಲಾ! ಇದ್ದೇ ಬಿಟ್ಟಿರುತ್ತವೆ. ಅವಕ್ಕೇ **ಸಿದ್ಧಿ**ಗಳು ಎಂದು ಹೆಸರು.

ಪಾತಂಜಲಯೋಗದರ್ಶನದಲ್ಲಿ ಇವುಗಳನ್ನು **ಅಷ್ಟ ಸಿದ್ಧಿಗಳು** ಎಂದು ಕರೆದಿದ್ದಾರೆ. ಅಷ್ಟಾಂಗಯೋಗವನ್ನು ಅಭ್ಯಾಸಮಾಡುವ ಪ್ರಚಂಡಯೋಗಿಗಳಿಗೆ ಈ **ಎಂಟು ಸಿದ್ಧಿಗಳು** ಉಂಟಾಗುತ್ತವೆ ಎಂದು ಹೇಳಿದ್ದಾರೆ. ಅವುಗಳು—

ಅಣಿಮಾ ಮಹಿಮಾ ಚೈವ ಗರಿಮಾ ಲಘಿಮಾ ತಥಾ।
ಪ್ರಾಪ್ತಿಃ ಪ್ರಾಕಾಮ್ಯಮೀಶಿತ್ವಂ ವಶಿತ್ವಂ "ಚಾಷ್ಟಸಿದ್ಧಯಃ"॥

೧. **ಅಣಿಮಾ:** ಅತ್ಯಂತ ಸಣ್ಣದಾಗಿಬಿಡುವುದು. ಎಂಭತ್ತು ಕೆ.ಜಿ. ತೂಕದ ಮನುಷ್ಯನು ಯೋಗದ ಬಲದಿಂದ ಸಣ್ಣ ನೊಣ, ಇಲಿಯಾಗಿಬಿಡುವುದು.

೨. **ಮಹಿಮಾ:** ಸಣ್ಣ ಮಾನವನು ತನ್ನ ತಪಸ್ಸಿನ ಬಲದಿಂದ ದೊಡ್ಡ ಆನೆಯಂತೆ, ದಪ್ಪನಾದ ಹಸುವಿನಂತೆ, ದಪ್ಪ ರಾಕ್ಷಸನಂತೆ ಆಗುವುದು.

೩. **ಗರಿಮಾ:** ತುಂಬಾ ಭಾರವಾಗಿಬಿಡುವುದು. ೫೦ ಕೆ. ಜಿ. ತೂಕದ ಯೋಗಿಯು ೧೦೦೦ ಕೆ. ಜಿ. ತೂಕದ ಬಂಡೆಯ ಕಲ್ಲಿನಂತೆ ಅತ್ಯಂತ ಭಾರವಾಗಿಬಿಡುವುದು.

೪. **ಲಘಿಮಾ:** ತುಂಬಾ ಹಗುರವಾಗಿಬಿಡುವುದು. ಎಂಭತ್ತು ಕೆ.ಜಿ. ತೂಕ ವಿರುವ ಯೋಗಿಯು ಐದು ಕೆ.ಜಿ.ಯಷ್ಟು ಹಗುರವಾಗಿಬಿಡುವುದು.

೫. **ಪ್ರಾಪ್ತಿ:** ತನ್ನ ಸಂಕಲ್ಪದಂತೆ ಕ್ಷಣಮಾತ್ರದಲ್ಲಿ ಎಲ್ಲಿಂದ ಎಲ್ಲಿಗೆ ಬೇಕಾದರೂ ಹೋಗಬಹುದಾದ ಅದ್ಭುತವಾದ ಒಂದು ಸಿದ್ಧಿ.

೬. **ಪ್ರಾಕಾಮ್ಯಂ:** ಏನನ್ನು ಬೇಕಾದರೂ ಹೊಂದಬಹುದಾದ ಸಾಮರ್ಥ್ಯ. ತಾನು ಬಯಸಿದ ವಸ್ತುಗಳನ್ನು ಕೂಡಲೇ ಹೊಂದುವ ಸಾಮರ್ಥ್ಯ.

೭. **ಈಶಿತ್ವಂ:** ಎಲ್ಲಾ ಮನುಷ್ಯರನ್ನೂ ಆಳುವ ಸಾಮರ್ಥ್ಯ.

೮. **ವಶಿತ್ವಂ:** ಎಲ್ಲರನ್ನೂ ತನ್ನ ವಶಕ್ಕೆ ತಂದುಕೊಳ್ಳುವ ಶಕ್ತಿ.

ಈ **ಎಂಟು** ಸಿದ್ಧಿಗಳನ್ನೂ ಈ ಮೇಲಿನ ಶ್ಲೋಕದಲ್ಲಿ ಸಂಗ್ರಹಿಸಿದೆ.

12. ಹದಿನಾಲ್ಕು ವಿದ್ಯಾಸ್ಥಾನಗಳು

ನಮ್ಮಲ್ಲಿ **ಚತುರ್ದಶ ವಿದ್ಯಾಸ್ಥಾನಗಳು** ಎಂದು ಪ್ರಸಿದ್ಧವಾಗಿರುತ್ತವೆ. ವಿದ್ಯೆಗಳ ಆಕರಗಳಿಗೇ **ವಿದ್ಯಾಸ್ಥಾನ** ಎಂದು ಹೆಸರು. ಅವು ಹದಿನಾಲ್ಕು. ಅವು ಯಾವುವೆಂದರೆ:

ಅಂಗಾನಿ ವೇದಾಶ್ಚತ್ವಾರಃ ಮೀಮಾಂಸಾನ್ಯಾಯವಿಸ್ತರಃ।
ಪುರಾಣಂ ಧರ್ಮಶಾಸ್ತ್ರಂ ಚ "ವಿದ್ಯಾ ಹ್ಯೇತಾಶ್ಚತುರ್ದಶ"॥

ಹದಿನಾಲ್ಕು ವಿದ್ಯಾಸ್ಥಾನಗಳ ವಿವರವನ್ನು ನೋಡೋಣ:

ಆರು ವೇದಾಂಗಗಳು: ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಜ್ಯೋತಿಷ್ಯ, ಛಂದಸ್ಸುಗಳು. ಶಿಕ್ಷಾ ಅಂಗವು ವೇದಪುರುಷನ ಮೂಗು, ಕಲ್ಪವು ಹಸ್ತಗಳು, ವ್ಯಾಕರಣವು ಮುಖ, ನಿರುಕ್ತವು ಕಿವಿ, ಜ್ಯೋತಿಷ್ಯವು ಕಣ್ಣು, ಛಂದಸ್ಸು ಪಾದಗಳು. ಈ ಆರು ವೇದಾಂಗಗಳು.

ವೇದಗಳು ನಾಲ್ಕು: ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಗಳು. ಶುಕ್ಲಯಜುರ್ವೇದವನ್ನೂ ಯಜುರ್ವೇದ ಎಂದಿದೆ.

ಮೀಮಾಂಸಾಶಾಸ್ತ್ರ: ಜೈಮಿನಿ ಆಚಾರ್ಯರ ಪೂರ್ವಮೀಮಾಂಸಾಶಾಸ್ತ್ರ ಹಾಗೂ ಭಗವಾನ್ ಬಾದರಾಯಣಾಚಾರ್ಯರ ಉತ್ತರಮೀಮಾಂಸಾದರ್ಶನ.

ನ್ಯಾಯದರ್ಶನ: ಗೌತಮ ಮಹರ್ಷಿಗಳ ನ್ಯಾಯದರ್ಶನ.

ಪುರಾಣಗಳು: ಭಗವಾನ್ ವೇದವ್ಯಾಸಮಹರ್ಷಿಗಳಿಂದ ರಚಿತವಾಗಿರುವ ಹದಿನೆಂಟು ಪುರಾಣಗಳು: ಮತ್ಸ್ಯ, ಮಾರ್ಕಂಡೇಯ, ಭವಿಷ್ಯೋತ್ತರ, ಭಾಗವತ, ಬ್ರಹ್ಮಾಂಡ, ಬ್ರಹ್ಮವೈವರ್ತ, ಬ್ರಾಹ್ಮ, ವರಾಹ, ವಾಯು, ವಾಮನ, ವಿಷ್ಣು, ಅಗ್ನಿ, ನಾರದ, ಪದ್ಮ, ಲಿಂಗ, ಗರುಡ, ಕೂರ್ಮ, ಸ್ಕಾಂದ ಪುರಾಣಗಳು.

ಧರ್ಮಶಾಸ್ತ್ರ: ಮನು, ಯಾಜ್ಞ್ಯವಲ್ಕ್ಯ, ಪರಾಶರ, ವಸಿಷ್ಠ, ಗೌತಮ, ಆಪಸ್ತಂಬ, ವ್ಯಾಸ, ವಿಶ್ವಾಮಿತ್ರ ಮುಂತಾದ ಮಹರ್ಷಿಗಳು ಬರೆದಿರುವ ಧರ್ಮಶಾಸ್ತ್ರಗಳು.

ಹೀಗೆ ಈ **ಹದಿನಾಲ್ಕು** ಗ್ರಂಥಗಳಲ್ಲಿ ಅನೇಕವಿಚಾರಗಳನ್ನು ತಿಳಿಸಿರುತ್ತದೆ. ಇವುಗಳೆಲ್ಲಕ್ಕೂ ಒಂದೇ ಒಂದು ಹೆಸರು, **ಚತುರ್ದಶ ವಿದ್ಯಾಸ್ಥಾನಗಳು** ಎಂದು. ಇವುಗಳೇ ಭಾರತದೇಶದ ಸಂಪತ್ತುಗಳು; ಇವುಗಳನ್ನು ಆರ್ಯಸಂಸ್ಕೃತಿಯ ಸಂಪತ್ತುಗಳು ಎಂದು ತಿಳಿಯಬೇಕು.

13. ಆರು ಶ್ರೇಷ್ಠಪಾಠಕರು

ವೇದಮಂತ್ರಗಳನ್ನು ಉಚ್ಚಾರಣೆಮಾಡಬೇಕಾದರೆ ಕೆಲವು ನಿಯಮಗಳನ್ನು ಪ್ರಾಚೀನಮಹರ್ಷಿಗಳು ಹೇಳಿರುತ್ತಾರೆ. ಆ ಕ್ರಮವು **ಆರು** ರೀತಿಯಾಗಿರುತ್ತದೆ. ಆ ಕ್ರಮದಿಂದ ವೇದಮಂತ್ರಗಳನ್ನು ಪಠನಮಾಡಬೇಕು. ಅವರಿಗೆ ಉತ್ತಮ ಪಾಠಕರು, ಗುಣ ಪಾಠಕರು, ಶ್ರೇಷ್ಠಪಾಠಕರು ಎಂದು ಹೆಸರು. ಆ ಆರು ನಿಯಮಗಳ ಪಟ್ಟಿಯನ್ನು ಈ ಕೆಳಗಿನ ಶ್ಲೋಕದಲ್ಲಿ ಸಂಗ್ರಹಿಸಿ ತಿಳಿಸಿದೆ:

ಮಾಧುರ್ಯಮ್ ಅಕ್ಷರವ್ಯಕ್ತಿಃ ಪದಚ್ಛೇದಸ್ತು ಸುಸ್ವರಃ।
ಧೈರ್ಯಂ ಲಯಸಮರ್ಥಂ ಚ "ಷಡೇತೇ ಪಾಠಕಾ ಗುಣಾಃ"॥

೧. **ಮಾಧುರ್ಯಂ:** ಕೇಳುವವರಿಗೆ ಹಿತವಾಗಿರುವಂತೆ ಮೃದುಮಧುರವಾಗಿ ವೇದಮಂತ್ರಗಳನ್ನು ಪಠಿಸಬೇಕು. ಕರ್ಕಷವಾಗಿ ಹೇಳಬಾರದು.

೨. **ಅಕ್ಷರವ್ಯಕ್ತಿಃ:** ಅಕ್ಷರಗಳು ಸ್ಪಷ್ಟವಾಗಿ ಕೇಳಿಸುವಂತೆ ವೇದಮಂತ್ರಗಳನ್ನು ಹೇಳಬೇಕು. ಯಾವುದೇ ಒಂದೂ ಅಕ್ಷರವು ಅಸ್ಪಷ್ಟವಾಗಿರಬಾರದು. ಎಂದರೆ ವೇದಮಂತ್ರಗಳ ಅಕ್ಷರಗಳನ್ನು ನುಂಗಿಕೊಂಡು ಮಂತ್ರಗಳನ್ನು ಪಾರಾಯಣಮಾಡಬಾರದು.

೩. **ಪದಚ್ಛೇದಃ:** ಒಂದು ಪದಕ್ಕೂ ಇನ್ನೊಂದು ಪದಕ್ಕೂ ಅವಕಾಶವನ್ನು ಕೊಟ್ಟು, ಅರ್ಥವಾಗುವಂತೆ ವೇದಮಂತ್ರಗಳನ್ನು ಉಚ್ಚರಿಸಬೇಕು.

೪. **ಸುಸ್ವರಃ:** ಮಂಗಳಕರವಾದ ಸ್ವರದಿಂದ ಉಚ್ಚರಿಸಬೇಕು. ಸಸ್ವರ ಹಾಗೂ ಸುಸ್ವರವಾಗಿಯೇ ಮಂತ್ರಗಳನ್ನು ಪಾರಾಯಣಮಾಡಬೇಕು.

೫. **ಧೈರ್ಯಂ:** ವೇದಮಂತ್ರಗಳನ್ನು ಸರಿಯಾಗಿ, ಗಟ್ಟಿಯಾಗಿ ಹಾಗೂ ಧೈರ್ಯವಾಗಿ, ಕಂಪನವಿಲ್ಲದೇ, ಅಳುಕಿಲ್ಲದೇ ಹೇಳಬೇಕು.

೬. **ಲಯಸಮರ್ಥಂ:** ಲಯಕ್ಕೆ ಸರಿಯಾಗಿಯೇ ಉಚ್ಚರಿಸಬೇಕು. ಉದಾತ್ತ, ಅನುದಾತ್ತ, ಸ್ವರಿತ ಸ್ವರಗಳೊಂದಿಗೆ; ಅಲ್ಪಪ್ರಾಣ ಮಹಾಪ್ರಾಣಗಳೊಂದಿಗೆ; ಶ, ಷ, ಸ ಕಾರಗಳನ್ನು ಬಿಡಿಸಿಕೊಂಡು, ಒಂದೇ ಸ್ಥಾಯಿಯಿಂದ ವೇದಮಂತ್ರಗಳನ್ನು ಉಚ್ಚರಿಸಬೇಕು. ಉತ್ತಮಪಾಠಕರ **ಆರು** ಗುಣಗಳಿವು.

ವೇದಮಂತ್ರಗಳಿಗೆ ಉದಾತ್ತ, ಅನುದಾತ್ತ, ಸ್ವರಿತಗಳೆಂದು ಮೂರು ಸ್ವರಗಳಿವೆ. ತಮ್ಮ ಗುರುಗಳಿಂದ ಮಂತ್ರಗಳನ್ನು ಸರಿಯಾಗಿ ಅಧ್ಯಯನಮಾಡಿ, ಅನಂತರ ಸ್ಪಷ್ಟವಾಗಿ ವೇದಮಂತ್ರಗಳನ್ನು ಪಠಿಸಬೇಕು.

14. ಸಪ್ತ ಚಿರಂಜೀವಿಗಳು

ಭಗವಂತನ ಅನುಗ್ರಹದಿಂದಲೂ ಸ್ವತಃ ಆಚರಿಸಿದ ತಪಸ್ಸಿನ ಪ್ರಭಾವದಿಂದಲೂ ಅನೇಕ ಮಹರ್ಷಿಗಳು **ಚಿರಂಜೀವಿಗಳಾಗಿರುತ್ತಾರೆ**. ಸಾವಿಲ್ಲದೇ ಎಂದೆಂದಿಗೂ ಸೂಕ್ಷ್ಮದೇಹದಿಂದ ಬದುಕಿರುವವರಿಗೇ **ಚಿರಂಜೀವಿಗಳೆಂದು** ಹೆಸರು. ಇಂಥ ಚಿರಂಜೀವಿಗಳಲ್ಲಿ ಏಳು ಮಹಾತ್ಮರುಗಳು **ಸಪ್ತ ಚಿರಂಜೀವಿಗಳು** ಎಂದು ಪ್ರಸಿದ್ಧರಾಗಿರುತ್ತಾರೆ. ಆ **ಸಪ್ತಚಿರಂಜೀವಿಗಳನ್ನು** ಸಂಗ್ರಹಿಸಿರುವ ಶ್ಲೋಕವನ್ನು ನೋಡೋಣ:

ಅಶ್ವತ್ಥಾಮಾ ಬಲಿರ್ವ್ಯಾಸೋ ಹನೂಮಾಂಶ್ಚ ವಿಭೀಷಣಃ।
ಕೃಪಃ ಪರಶುರಾಮಶ್ಚ "ಸಪ್ತೈತೇ ಸ್ಥಿರಜೀವಿನಃ"॥

೧. **ಅಶ್ವತ್ಥಾಮ:** ದ್ರೋಣಾಚಾರ್ಯರ ಸುಪುತ್ರರಾದ ಅಶ್ವತ್ಥಾಮರು ಪರಾಕ್ರಮಿಗಳೂ ಪಿತೃಭಕ್ತರೂ ಹಾಗೂ ಮಹಾತಪಸ್ವಿಗಳೂ ಆಗಿದ್ದ ಬ್ರಾಹ್ಮಣಪುಂಗವರು.

೨. **ಬಲಿಚಕ್ರವರ್ತಿ:** ಮಹಾವಿಷ್ಣುಸ್ವರೂಪನೇ ಆದ ವಾಮನವಟುವಿಗೆ ಸರ್ವಸ್ವವನ್ನೂ ದಾನಮಾಡಿದ ಅಸುರರಾಜ ಬಲೀಂದ್ರ. ಬಲೀಂದ್ರನ ಭಕ್ತಿಗೆ ಹಾಗೂ ತ್ಯಾಗಕ್ಕೆ ಮೆಚ್ಚಿದ ಮಹಾವಿಷ್ಣುವು ಇವನಿಗೆ ಚಿರಂಜೀವಿತ್ವವನ್ನೇ ಕರುಣಿಸಿದನು.

೩. **ವೇದವ್ಯಾಸರು:** ಪರಾಶರ ಮಹರ್ಷಿಗಳ ಸುಪುತ್ರರಾದ ವೇದವ್ಯಾಸರು ಹದಿನೆಂಟು ಪುರಾಣಗಳನ್ನೂ ಬ್ರಹ್ಮಸೂತ್ರಗಳನ್ನೂ ರಚಿಸಿರುವ ಸರ್ವಜ್ಞಕಲ್ಪರಾದ ವೇದಪುರುಷರು.

೪. **ಹನುಮಂತ:** ಶ್ರೀರಾಮಚಂದ್ರನ ದಾಸನಾಗಿ, ಶ್ರೀರಾಮನಿಗೂ ಸೀತಾದೇವಿಗೂ ಆನಂದವನ್ನು ತಂದುಕೊಟ್ಟ ಮಹಾತ್ಯಾಗಮೂರ್ತಿ ಆಂಜನೇಯ. ಶ್ರೀರಾಮನಾಮದ ಮಹಿಮೆಯನ್ನು ಜಗತ್ತಿಗೆ ಸಾರಿದ ಮಹಾತ್ಮ ಹನುಮಂತ.

೫. **ವಿಭೀಷಣ:** ಅಸುರಕುಲದಲ್ಲಿ ಹುಟ್ಟಿದ್ದರೂ ರಾವಣೇಶ್ವರನ ತಮ್ಮನಾದರೂ, ಶ್ರೀರಾಮನಿಗೆ ಸಂಪೂರ್ಣಶರಣಾಗತನಾದ ಭಾಗವತೋತ್ತಮ ವಿಭೀಷಣ.

೬. **ಕೃಪಾಚಾರ್ಯರು:** ಪರಮಧಾರ್ಮಿಕರೂ, ಸತ್ಯಸಂಧರೂ, ಮಹಾತಪಸ್ವಿಗಳೂ ಆದ ಕೃಪಾಚಾರ್ಯರು ಶ್ರೀಕೃಷ್ಣಪರಮಾತ್ಮನ ಪರಮಭಕ್ತರೂ ಹೌದು.

೭. **ಪರಶುರಾಮ:** ಮಹಾವಿಷ್ಣುವಿನ ಆರನೆಯ ಅವತಾರವಾಗಿ ಅವತರಿಸಿದ ಪರಶುರಾಮರು ಪಿತೃಭಕ್ತರಾಗಿ ಧರ್ಮಸಂಸ್ಥಾಪನೆಯನ್ನು ಮಾಡಿದ ಮಹಾತ್ಮರಾದ ಚಿರಂಜೀವಿಗಳು.

ಈ **ಸಪ್ತ ಚಿರಂಜೀವಿಗಳನ್ನು** ಪ್ರತಿದಿನವೂ ಸ್ಮರಿಸಬೇಕು.

15. ಪಂಚ ಜ್ಞಾನೇಂದ್ರಿಯಗಳು

ಮನುಷ್ಯನಿಗೆ ಬಾಹ್ಯವಿಷಯಗಳ ಅರಿವನ್ನು ಉಂಟುಮಾಡುವ ಕರಣಗಳಿಗೆ ಇಂದ್ರಿಯಗಳು ಎಂದು ಹೆಸರು. ಇವುಗಳಿಗೇ **ಪ್ರಮಾಣ**ಗಳು ಎಂದೂ ಹೆಸರು. **ಪ್ರಮಾಕರಣಂ ಪ್ರಮಾಣಂ**. ಪ್ರಮಾತೃವಿಗೆ ಪ್ರಮೇಯಗಳ ಜ್ಞಾನವನ್ನು ಉಂಟು ಮಾಡುವ ಕರಣಗಳೇ ಪ್ರಮಾಣಗಳು. ಇವುಗಳು ಐದು ಎಂದು ಹಿರಿಯರು ಹೇಳಿದ್ದಾರೆ. ಒಂದೊಂದು ಇಂದ್ರಿಯವೂ ತನ್ನ ತನ್ನ ವಿಷಯವನ್ನು ವಿಜ್ಞಾನಾತ್ಮ ನಾದ ಶರೀರಿಯೆಂಬ ಜೀವಾತ್ಮನಿಗೆ ತಿಳಿಸುತ್ತವೆ. ಆ ಇಂದ್ರಿಯಗಳು:

ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವ ಚ।
"ಬುದ್ಧೀಂದ್ರಿಯಾಣಿ ಪಂಚೈವ" ಶಬ್ದಾದೀನ್ ಗ್ರಾಹಯಂತಿ ಹಿ॥

ಶ್ರೋತ್ರ ಎಂದರೆ ಕಿವಿ, ಚಕ್ಷುಃ ಎಂದರೆ ಕಣ್ಣು, ಸ್ಪರ್ಶನ ಎಂದರೆ ಚರ್ಮೇಂದ್ರಿಯ, ರಸನ ಎಂದರೆ ನಾಲಗೆ, ಘ್ರಾಣ ಎಂದರೆ ಮೂಗು—ಇವು ಜ್ಞಾನೇಂದ್ರಿಯಗಳು.

೧. **ಶ್ರೋತ್ರೇಂದ್ರಿಯ:** ಕಿವಿಗಳು. ಶಬ್ದಗಳನ್ನು ಈ ಕಿವಿಗಳು ಅರಿಯುತ್ತವೆ. ಮೃದುಶಬ್ದ, ರೋದನ ಶಬ್ದ, ಸಂಸ್ಕೃತಭಾಷಾ ಶಬ್ದ ಇತ್ಯಾದಿ ಇತ್ಯಾದಿ ಶಬ್ದಗಳನ್ನೆಲ್ಲ ಸ್ಪಷ್ಟವಾಗಿ ಹಾಗೂ ಕರಾರುವಾಕ್ಕಾಗಿ ನಮಗೆ ತಿಳಿಸುವ ಕರಣವೆಂದರೆ **ಶ್ರೋತ್ರ**.

೨. **ಚಕ್ಷುರಿಂದ್ರಿಯ:** ಕಣ್ಣುಗಳು. ಅತ್ಯಂತ ದೂರದಲ್ಲಿರುವ ಸೂರ್ಯ, ಚಂದ್ರ, ನಕ್ಷತ್ರ, ಗ್ರಹಾದಿಗಳನ್ನು ಚಕ್ಷುರಿಂದ್ರಿಯವು ನಮಗೆ ತಿಳಿಸುತ್ತದೆ ಯಲ್ಲವೇ? ರೂಪವುಳ್ಳ ವಸ್ತುಗಳನ್ನು ತಿಳಿಸುವ ಕರಣವೆಂದರೆ **ಚಕ್ಷುರಿಂದ್ರಿಯ**. ಇದು ವ್ಯವಹಾರದಲ್ಲಿ ಬಹಳ ಮುಖ್ಯವಾದ ಕರಣ.

೩. **ಸ್ಪರ್ಶೇಂದ್ರಿಯ:** ಚರ್ಮ. ಈ ಚರ್ಮೇಂದ್ರಿಯವು ಬಿಸಿ, ಮೃದು, ವರಟು ಮುಂತಾದ ವಿಷಯಗಳನ್ನು ನಮಗೆ ತಿಳಿಸುತ್ತದೆಯಲ್ಲವೇ?

೪. **ರಸನೇಂದ್ರಿಯ:** ನಾಲಗೆ. ನಾಲಗೆಯು ಸಿಹಿ, ಖಾರ, ಉಪ್ಪು, ಹುಳಿ, ಒಗರು ಮುಂತಾದ ರುಚಿಗಳನ್ನು ನಮಗೆ ತಿಳಿಸುತ್ತದೆ.

೫. **ಘ್ರಾಣೇಂದ್ರಿಯ:** ಮೂಗು. ಇದೂ ಕೂಡ ನಮಗೆ ಅನೇಕರೀತಿಯ ವಾಸನೆಗಳನ್ನು ತಿಳಿಸುತ್ತದೆ. ಊದುಗಡ್ಡಿ ವಾಸನೆ, ಸುಗಂಧಪರಿಮಳದ ವಾಸನೆ, ಬೆಳ್ಳುಳ್ಳಿ ವಾಸನೆ, ತುಪ್ಪದ ವಾಸನೆಗಳನ್ನು ನಮಗೆ ತಿಳಿಸುವ ಕರಣವೆಂದರೆ ಘ್ರಾಣೇಂದ್ರಿಯ.

ಹೀಗೆ ಸಕಲಮಾನವರಿಗೂ ಐದು ಜ್ಞಾನೇಂದ್ರಿಯಗಳಿವೆ.

16. ನಮಸ್ಕಾರದ ಎಂಟು ಅಂಗಗಳು

ದೇವರಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಬೇಕು ಎಂದು ಹಿರಿಯರು ಹೇಳುತ್ತಾರಲ್ಲವೆ? ಸೂರ್ಯನಿಗಂತೂ ಸಾಷ್ಟಾಂಗ ನಮಸ್ಕಾರವನ್ನೇ ಮಾಡಬೇಕಲ್ಲವೇ? **ಅಷ್ಟ** ಅಂಗಗಳಿಂದ ಕೂಡಿದ ನಮಸ್ಕಾರಕ್ಕೆ **ಸಾಷ್ಟಾಂಗ ನಮಸ್ಕಾರ** ಎಂದು ಹೆಸರು. ಆ **ಎಂಟು** ಅಂಗಗಳನ್ನು ಈ ಶ್ಲೋಕದಲ್ಲಿ ಸಂಗ್ರಹಿಸಿದೆ:

ಉರಸಾ ಶಿರಸಾ ದೃಷ್ಟ್ಯಾ ಮನಸಾ ವಚಸಾ ತಥಾ।
ಪದ್ಭ್ಯಾಂ ಕರಾಭ್ಯಾಂ ಕರ್ಣಾಭ್ಯಾಂ "ಪ್ರಣಾಮೋಽಷ್ಟಾಂಗ" ಉಚ್ಯತೇ॥

೧. **ಉರಸಾ** ಎಂದರೆ ಎದೆಯಿಂದ. ನಮಸ್ಕಾರವನ್ನು ಮಾಡುವಾಗ ನಮ್ಮ ಎದೆಯು ನೆಲಕ್ಕೆ ಸ್ಪರ್ಶವಾಗಿರಬೇಕು.

೨. **ಶಿರಸಾ** ಎಂದರೆ ತಲೆಯಿಂದ. ತಲೆಯ ಮುಂಭಾಗವನ್ನು ನೆಲಕ್ಕೆ ಸ್ಪರ್ಶಿಸಿ ದೇವರಿಗೆ ನಮಸ್ಕಾರವನ್ನು ಮಾಡಬೇಕು.

೩. **ದೃಷ್ಟ್ಯಾ** ಎಂದರೆ ಎರಡೂ ಕಣ್ಣುಗಳನ್ನು ನೆಲಕ್ಕೆ ತಾಕಿಸಿಯೇ ದೇವರಿಗೆ ನಮಸ್ಕಾರವನ್ನು ಮಾಡಬೇಕು.

೪. **ಮನಸಾ** ಎಂದರೆ ಮನಸ್ಸಿನಿಂದ. ಭಕ್ತಿಭಾವನೆಯಿಂದಲೇ ಮನಃಪೂರ್ವಕವಾಗಿ ಗುರುಹಿರಿಯರಿಗೆ ನಮಸ್ಕಾರವನ್ನು ಮಾಡಬೇಕು.

೫. **ವಚಸಾ** ಎಂದರೆ ವಾಗಿಂದ್ರಿಯದಿಂದ. ಗುರುಹಿರಿಯರನ್ನು ವಾಗಿಂದ್ರಿಯದಿಂದ ಸ್ತುತಿಸುತ್ತಾ, ಮಂತ್ರವನ್ನು ಹೇಳುತ್ತಾ ನಮಸ್ಕರಿಸಬೇಕು.

೬. **ಪದ್ಭ್ಯಾಂ** ಎಂದರೆ ಎರಡೂ ಕಾಲುಗಳಿಂದ. ಪಾದಗಳನ್ನು ಉದ್ದವಾಗಿ ನೀಡಿಕೊಂಡೇ ಸೂರ್ಯನಮಸ್ಕಾರವನ್ನು ಮಾಡಬೇಕು.

೭. **ಕರಾಭ್ಯಾಂ** ಎಂದರೆ ಎರಡೂ ಕೈಗಳಿಂದ. ಎರಡೂ ಕರಗಳನ್ನು ಒಟ್ಟಿಗೆ ಜೋಡಿಸಿಕೊಂಡೇ ನೆಲಕ್ಕೆ ಸ್ಪರ್ಶಮಾಡಿ ನಮಸ್ಕರಿಸಬೇಕು.

೮. **ಕರ್ಣಾಭ್ಯಾಂ** ಎಂದರೆ ಎರಡೂ ಕಿವಿಗಳಿಂದ. ಒಂದಾದಮೇಲೆ ಇನ್ನೊಂದರಂತೆ ಎರಡೂ ಕಿವಿಗಳಿಂದ ಬಾಗಿ ನಮಸ್ಕಾರವನ್ನು ಮಾಡಬೇಕು.

ಹೀಗೆ ನಮ್ಮ ದೇಹದ ಜೊತೆಯಲ್ಲಿ ಇಂದ್ರಿಯಗಳನ್ನೂ ಮನಸ್ಸನ್ನೂ ಸೇರಿಸಿಕೊಂಡು ನಮಸ್ಕಾರಮಾಡಿದಾಗಲೇ ಅದು **ಸಾಷ್ಟಾಂಗ ನಮಸ್ಕಾರ**ವಾಗುತ್ತದೆ.

17. ಆರು ಭಗಗಳು

ಪರಮಾತ್ಮನಿಗೆ **ಭಗವಂತ** ಎಂಬ ಹೆಸರೂ ಇದೆಯಲ್ಲವೇ? ಭಗವಂತ, ಈಶ್ವರ, ದೇವ ಎಂದು ಮುಂತಾಗಿ ಪರಮಾತ್ಮನನ್ನು ಪುರಾಣಗಳಲ್ಲಿ ವರ್ಣಿಸಿರುತ್ತಾರೆ. ಹಾಗೆಯೇ ತಪಸ್ವಿಗಳನ್ನೂ, ಬ್ರಹ್ಮಜ್ಞಾನಿಗಳನ್ನೂ, ಮಹಾತ್ಮರುಗಳನ್ನೂ, ಸದ್ಗುರುಗಳನ್ನೂ, ಯತಿಪುಂಗವರನ್ನೂ **ಭಗವಾನ್** ಎಂದೇ ಕರೆಯುವ ಸಂಪ್ರದಾಯವು ನಮ್ಮಲ್ಲಿ ಇದೆ. ಉದಾಹರಣೆಗೆ: ಭಗವಾನ್ ಶ್ರೀರಾಮಚಂದ್ರಃ, ಭಗವಾನ್ ಶ್ರೀಕೃಷ್ಣಃ, ಭಗವಾನ್ ವೇದವ್ಯಾಸಃ, ಭಗವಾನ್ ಶ್ರೀರಮಣಃ, ಭಗವಾನ್ ಶ್ರೀಶಂಕರಃ, ಭಗವಾನ್ ಶ್ರೀಶ್ರೀಧರಃ ಇತ್ಯಾದಿ ಇತ್ಯಾದಿ. ಅಂತೂ **ಭಗವಾನ್** ಎಂಬ ಈ ಶಬ್ದವು ನಮಗೆಲ್ಲ ಚಿರಪರಿಚಿತವಾಗಿದೆಯಲ್ಲವೇ? ಹೌದು, ಆದರೆ **ಭಗಾಃ ಯಸ್ಯ ಸಂತಿ ಸಃ ಭಗವಾನ್**, ಭಗಗಳನ್ನು ಉಳ್ಳವನೇ ಭಗವಂತನು ಎಂಬುದು ಮಾತ್ರ ಎಲ್ಲರಿಗೂ ತಿಳಿದಿಲ್ಲ. ಹಾಗಾದರೆ **ಭಗಾಃ** ಎಂದರೆ ಏನರ್ಥ? ಎಂದರೆ, ಆರು ಗುಣಗಳು. ಸರಿ, ಆ ಆರು ಗುಣಗಳು ಯಾವುವು ಎಂದರೆ: ಇಲ್ಲಿದೆ **ಭಗ**ಗಳ ಸಂಗ್ರಾಹಕ ಶ್ಲೋಕ:

ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ।
ವೈರಾಗ್ಯಸ್ಯಾಥ ಮೋಕ್ಷಸ್ಯ "ಷಣ್ಣಾಂ ಭಗ ಇತೀರಣಾ"॥

೧. **ಸಮಗ್ರವಾದ ಐಶ್ವರ್ಯ:** ಸಂಪೂರ್ಣವಾದ ಒಡೆತನ. ಎಲ್ಲರನ್ನೂ ಯಾವಾಗಲೂ ಆಳುವಿಕೆ. **ಈಶ್ವರಸ್ಯ ಭಾವಃ ಐಶ್ವರ್ಯಮ್**.

೨. **ಸಮಗ್ರವಾದ ಧರ್ಮ:** ಸಂಪೂರ್ಣವಾಗಿ ಧರ್ಮನಿಷ್ಠನಾಗಿರುವಿಕೆ. ಭಗವಂತನ ಹಾಗೂ ಮಹಾತ್ಮರ ಜೀವನದಲ್ಲಿ ಕಿಂಚಿತ್ತೂ ಅಧರ್ಮವು ಇರಲೇ ಆರದು.

೩. **ಸಮಗ್ರವಾದ ಯಶಸ್ಸು:** ಭಗವಂತನ ಯಶಸ್ಸಿಗೆ ಇತಿಮಿತಿಗಳೇ ಇಲ್ಲ.

೪. **ಸಮಗ್ರವಾದ ಸಂಪತ್ತು:** ಈ ವಿಶ್ವದಲ್ಲಿರುವ ಎಲ್ಲರ ಸಂಪತ್ತುಗಳೂ ಭಗವಂತನ ಸಂಪತ್ತೇ ಅಲ್ಲವೇ?

೫. **ಸಮಗ್ರವಾದ ವೈರಾಗ್ಯ:** ವೈರಾಗ್ಯವೇ ಸೌಭಾಗ್ಯವಲ್ಲವೇ?

೬. **ಸಮಗ್ರವಾದ ಮೋಕ್ಷ:** ಜನ್ಮಮರಣಗಳಿಲ್ಲದ ಸಚ್ಚಿದಾನಂದ ಸಹಜಾನಂದ ಸ್ವರೂಪವೇ ಮೋಕ್ಷ.

ಈ ಆರು **ಭಗ**ಗಳನ್ನುಳ್ಳವನೇ ಭಗವಂತನು.

18. ಭಾರತದಲ್ಲಿನ ಪಂಚ ರತ್ನಗಳು

ಭಗವಾನ್ ವೇದವ್ಯಾಸರು **ಮಹಾಭಾರತ** ಎಂಬ ಇತಿಹಾಸಗ್ರಂಥವನ್ನು ಬರೆದಿದ್ದಾರೆ. ಅದರಲ್ಲಿ ೧೮ ಪರ್ವಗಳಿದ್ದು, ಒಟ್ಟು ಒಂದು ಲಕ್ಷ ಶ್ಲೋಕಗಳಿರುತ್ತವೆ. ಮಹಾಭಾರತವೆಂದರೆ ಜ್ಞಾನಸಾಗರ. ಇದರಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷ—ಎಲ್ಲಾ ವಿಚಾರಗಳೂ ಇರುತ್ತವೆ. ಇಂಥ ಮಹಾಭಾರತದಲ್ಲಿ ಐದು ರತ್ನಗಳಿವೆ ಎಂದು ಹಿರಿಯರು ಹೇಳುತ್ತಾರೆ. ಅವುಗಳು ಯಾವುವೆಂದರೆ:

ಗೀತಾ ಸಹಸ್ರನಾಮೈವ ಸ್ತವರಾಜೋ ಹ್ಯನುಸ್ಮೃತಿಃ।
ಗಜೇಂದ್ರಮೋಕ್ಷಣಂ ಚೈವ "ಪಂಚ ರತ್ನಾನಿ ಭಾರತೇ"॥

೧. **ಭಗವದ್ಗೀತಾ:** ಶ್ರೀಕೃಷ್ಣಭಗವಂತನು ವೀರಾಗ್ರಣಿಯಾದ ಅರ್ಜುನನಿಗೆ ರಣರಂಗದಲ್ಲಿ ಉಪದೇಶಿಸಿದ ಸಂದೇಶಗಳೇ **ಭಗವದ್ಗೀತೆ.** ಸಕಲ ಮಾನವರಿಗೂ ಶ್ರೇಯೋಮಾರ್ಗವನ್ನೂ ಹಾಗೂ ಕರ್ತವ್ಯಪ್ರಜ್ಞೆಯನ್ನೂ ಉಪದೇಶಮಾಡುವ ಭಗವದ್ಗೀತೆಯು **ಭಾರತದ ಪಂಚರತ್ನಗಳಲ್ಲಿ** ಪ್ರಪ್ರಥಮವಾಗಿರುತ್ತದೆ.

೨. **ಶ್ರೀವಿಷ್ಣುಸಹಸ್ರನಾಮಸ್ತೋತ್ರ:** ಭೀಷ್ಮಪಿತಾಮಹರು ಧರ್ಮರಾಜನಿಗೆ ಉಪದೇಶಿಸಿದ ಸಹಸ್ರನಾಮಸ್ತೋತ್ರವಿದು. ಭಗವಂತನ ಒಂದು ಸಹಸ್ರ ನಾಮಗಳಿಂದ ಕೂಡಿದ ಸ್ತೋತ್ರರತ್ನ. ಸಕಲ ಆಪತ್ತುಗಳನ್ನೂ ಪರಿಹರಿಸಿ, ಸಕಲಸಂಪತ್ತುಗಳನ್ನೂ ತಂದುಕೊಡುವ ಸ್ತೋತ್ರವಿದು. ಭಗವಂತನ ನಿರ್ಗುಣ ಹಾಗೂ ಸಗುಣ ಸ್ವರೂಪವನ್ನು ಈ ನಾಮಗಳಲ್ಲಿ ಅತ್ಯಂತ ಸುಂದರವಾಗಿ ತಿಳಿಸಲಾಗಿರುತ್ತದೆ.

೩. **ಭೀಷ್ಮಸ್ತವರಾಜ:** ಬಾಣಗಳ ಹಾಸಿಗೆಯ ಮೇಲೆ ಮಲಗಿದ್ದ ಭಾಗವತೋತ್ತಮರಾದ ಭೀಷ್ಮಪಿತಾಮಹರು ಶ್ರೀಕೃಷ್ಣಭಗವಂತನನ್ನು ಸ್ತುತಿಸಿರುವ ಈ ಸ್ತೋತ್ರವು ಅನ್ವರ್ಥ **ಸ್ತವರಾಜವೇ** ಆಗಿರುತ್ತದೆ.

೪. **ಅನುಸ್ಮೃತಿ:** ಮರಣಕಾಲದಲ್ಲಿ ಭಗವಂತನನ್ನು ಸ್ಮರಣೆಮಾಡುವ ಸ್ತೋತ್ರವನ್ನು ಇಲ್ಲಿ ಹೇಳಿದೆ. **ಓಂ ನಮೋ ಭಗವತೇ ವಾಸುದೇವಾಯ** ಎಂಬ ದ್ವಾದಶಾಕ್ಷರೀಮಂತ್ರವನ್ನೂ ಅದರ ವಿವರಗಳನ್ನೂ ಇಲ್ಲಿ ತಿಳಿಸಿದೆ.

೫. **ಗಜೇಂದ್ರಮೋಕ್ಷ:** ನಿರ್ವಿಶೇಷವಾದ ಪರಬ್ರಹ್ಮವನ್ನು ತಿಳಿಸಿ, ಅದರ ಜ್ಞಾನದಿಂದ ಮೋಕ್ಷವೇ ಪ್ರಾಪ್ತವಾಗುತ್ತದೆ ಎಂದು ತಿಳಿಸುವ ಸ್ತೋತ್ರವಿದು.

19. ಹದಿನೆಂಟು ಪುರಾಣಗಳು

ಭಗವಾನ್ ವೇದವ್ಯಾಸರಿಂದ ರಚಿಸಲ್ಪಟ್ಟ ಪುರಾಣಗಳು ಹದಿನೆಂಟು. ಈ ಹದಿನೆಂಟು ಪುರಾಣಗಳ ಹೆಸರುಗಳನ್ನೂ ನೆನಪಿನಲ್ಲಿ ಇಟ್ಟುಕೊಳ್ಳುವುದು ಎಲ್ಲರಿಗೂ ಸುಲಭವಲ್ಲ. ಆದರೆ ಒಂದೇ ಶ್ಲೋಕದಲ್ಲಿ ಆ ಹದಿನೆಂಟು ಮಹಾಪುರಾಣಗಳನ್ನೂ ಗಟ್ಟುಮಾಡಿಕೊಂಡು ಅರ್ಥಮಾಡಿಕೊಳ್ಳುವುದು ಅಷ್ಟೊಂದು ಕಷ್ಟವೇನಲ್ಲ. ಆ ಶ್ಲೋಕವನ್ನು ನೋಡೋಣ:

ಮದ್ವಯಂ ಭದ್ವಯಂ ಚೈವ ಬ್ರತ್ರಯಂ ವಚತುಷ್ಟಯಮ್।
ಅ ನಾ ಪ ಲಿಂ ಗ ಕೂ ಸ್ಕಾ ನಿ "ಪುರಾಣಾನಿ ಪ್ರಚಕ್ಷತೇ"॥

ಈ ಶ್ಲೋಕದಲ್ಲಿ ಆಯಾ ಪುರಾಣಗಳ ಮೊದಲನೆಯ ಅಕ್ಷರವನ್ನು ತಿಳಿಸಿ ಆದರ ಮೂಲಕ ಹದಿನೆಂಟು ಪುರಾಣಗಳ ಹೆಸರುಗಳನ್ನು ತಿಳಿಸಿದೆ.

ಮದ್ವಯಂ: ಮಕಾರದಿಂದ ಪ್ರಾರಂಭಗೊಳ್ಳುವ **ಎರಡು** ಪುರಾಣಗಳು. **ಮ**ತ್ಸ್ಯಪುರಾಣ ಮತ್ತು **ಮಾ**ರ್ಕಂಡೇಯ ಪುರಾಣಗಳು.

ಭದ್ವಯಂ: ಭಕಾರದಿಂದ ಮೊದಲಾಗುವ **ಎರಡು** ಪುರಾಣಗಳು. **ಭ**ವಿಷ್ಯೋತ್ತರ ಪುರಾಣ ಮತ್ತು **ಭಾ**ಗವತ ಪುರಾಣ.

ಬ್ರತ್ರಯಂ: ಬ್ರಕಾರದಿಂದ ಪ್ರಾರಂಭಗೊಳ್ಳುವ **ಮೂರು** ಪುರಾಣಗಳು. **ಬ್ರ**ಹ್ಮಾಂಡ ಪುರಾಣ, **ಬ್ರ**ಹ್ಮವೈವರ್ತಪುರಾಣ ಮತ್ತು **ಬ್ರ**ಹ್ಮಪುರಾಣಗಳು.

ವಚತುಷ್ಟಯಂ: ವಕಾರದಿಂದ ಪ್ರಾರಂಭಗೊಳ್ಳುವ **ನಾಲ್ಕು** ಪುರಾಣಗಳು. **ವ**ರಾಹಪುರಾಣ, **ವಾ**ಯುಪುರಾಣ, **ವಾ**ಮನಪುರಾಣ, **ವಿ**ಷ್ಣುಪುರಾಣಗಳು.

ಅ ನಾ ಪ ಲಿಂ ಗ ಕೂ ಸ್ಕಾ: ಅಗ್ನಿಪುರಾಣ, **ನಾ**ರದಪುರಾಣ, **ಪ**ದ್ಮಪುರಾಣ, **ಲಿಂ**ಗಪುರಾಣ, **ಗ**ರುಡಪುರಾಣ, **ಕೂ**ರ್ಮಪುರಾಣ, **ಸ್ಕಾಂ**ದಪುರಾಣ.

೧) ಮತ್ಸ್ಯಪುರಾಣ ೨) ಮಾರ್ಕಂಡೇಯಪುರಾಣ ೩) ಭವಿಷ್ಯೋತ್ತರ ಪುರಾಣ ೪) ಭಾಗವತಪುರಾಣ ೫) ಬ್ರಹ್ಮಾಂಡಪುರಾಣ ೬) ಬ್ರಹ್ಮವೈವರ್ತ ಪುರಾಣ ೭) ಬ್ರಹ್ಮಪುರಾಣ ೮) ವರಾಹಪುರಾಣ ೯) ವಾಯುಪುರಾಣ ೧೦) ವಿಷ್ಣುಪುರಾಣ ೧೧) ವಾಮನಪುರಾಣ ೧೨) ಅಗ್ನಿಪುರಾಣ ೧೩) ನಾರದ ಪುರಾಣ ೧೪) ಪದ್ಮಪುರಾಣ ೧೫) ಲಿಂಗಪುರಾಣ ೧೬) ಗರುಡಪುರಾಣ ೧೭) ಕೂರ್ಮಪುರಾಣ ೧೮) ಸ್ಕಾಂದಪುರಾಣ.

ಹೀಗೆ ಈ **ಹದಿನೆಂಟು ಪುರಾಣ**ಗಳನ್ನೂ ಸುಲಭವಾಗಿ ನೆನಪಿನಲ್ಲಿ ಇಟ್ಟುಕೊಳ್ಳಲು ಈ ಮೇಲಿನ ಸಂಗ್ರಾಹಕ ಶ್ಲೋಕವು ಎಷ್ಟೊಂದು ಸಹಾಯಕವಾಗಿದೆ!

20. ದಶ ದಾನಗಳು

ಸ್ವಾರ್ಥಿಗಳಾದ ಮಾನವರು ಹೇಗೋ ತಮಗೆ ತಿಳಿದೋ ತಿಳಿಯದೆಯೋ ಪಾಪಕರ್ಮಗಳನ್ನು ಮಾಡುತ್ತಲೇ ಇರುತ್ತಾರೆ. ಅನ್ಯಾಯ, ಅನೃತ, ವಂಚನೆ, ಮೋಸ, ಕಾಪಟ್ಯ—ಎಲ್ಲವೂ ಮಾನವರ ಜೀವನದಲ್ಲಿ ನುಸುಳಿಕೊಂಡು ಬರುತ್ತಲೇ ಇರುತ್ತವೆ. ಇದಕ್ಕೆಲ್ಲ ಒಂದೇ ಹೆಸರು **ಪಾಪಕರ್ಮಗಳು** ಎಂದು. ಇದರಿಂದ ಬಡತನ, ರೋಗ, ದುಃಖ, ನರಳಾಟ—ಎಲ್ಲವೂ ಉಂಟಾಗುತ್ತಾ ಇರುತ್ತವೆ. ಇದಕ್ಕೆಲ್ಲ ಶಾಸ್ತ್ರಗಳಲ್ಲಿ ಅನೇಕ ಪರಿಹಾರೋಪಾಯಗಳನ್ನು ಹೇಳಿರುತ್ತಾರೆ. ಅವುಗಳ ಪೈಕಿ **ದಾನ**ವೆಂಬುದು ಅತ್ಯಂತ ಶ್ರೇಷ್ಠವಾದದ್ದು.

ದಾನದಿಂದ ಪಾಪನಾಶ, ಆರೋಗ್ಯ, ಆಯುಷ್ಯ, ಕೀರ್ತಿ, ಶಾಂತಿ, ಸುಖ, ನೆಮ್ಮದಿ—ಎಲ್ಲವೂ ಉಂಟಾಗುತ್ತವೆ. ಏನನ್ನೇ ಕೊಟ್ಟರೂ ದಾನವೆನಿಸುತ್ತದೆ. ತಾನು ಸಂಪಾದಿಸಿದ ಯಾವುದೇ ವಸ್ತುವನ್ನು ಸತ್ಪಾತ್ರಕ್ಕೆ ಸಂತೋಷದಿಂದ ಕೊಡುವುದಕ್ಕೆ **ದಾನ** ಎಂದು ಹೆಸರು. ಆದರೆ ಈ ದಾನಗಳಲ್ಲಿ **ದಶ ದಾನ**ಗಳೆಂದು **ಹತ್ತು** ದಾನಗಳು ಪ್ರಸಿದ್ಧವಾಗಿರುತ್ತವೆ. ಆ ಶ್ಲೋಕವನ್ನು ನಾವೀಗ ನೋಡೋಣ:

ಗೋ ಭೂ ತಿಲ ಹಿರಣ್ಯಾಜ್ಯ ವಾಸೋ ಧಾನ್ಯ ಧನಾನಿ ಚ।
ರೌಪ್ಯಂ ಲವಣಮಿತ್ಯೇತೇ "ದಶ ದಾನಾಃ ಪ್ರಕೀರ್ತಿತಾಃ"॥

೧. **ಗೋದಾನ:** ಹಾಲನ್ನು ಕೊಡುತ್ತಿರುವ ಹಸುವನ್ನು ದಾನಮಾಡುವುದು.
೨. **ಭೂದಾನ:** ಫಲವತ್ತಾದ ಭೂಮಿಯನ್ನು ದಾನಮಾಡುವುದು.
೩. **ತಿಲದಾನ:** ಕಪ್ಪು ಎಳ್ಳನ್ನು ದಾನಮಾಡುವುದು.
೪. **ಹಿರಣ್ಯದಾನ:** ಬಂಗಾರದ ವಸ್ತುವನ್ನು ದಾನಮಾಡುವುದು.
೫. **ಆಜ್ಯದಾನ:** ಹಸುವಿನ ತುಪ್ಪವನ್ನು ದಾನಮಾಡುವುದು.
೬. **ವಾಸೋದಾನ:** ಉಪಯೋಗವಾಗುವಂಥ ಬಟ್ಟೆಗಳನ್ನು ಸತ್‌ಪಾತ್ರರಿಗೆ ದಾನಮಾಡುವುದು.
೭. **ಧಾನ್ಯದಾನ:** ಅಕ್ಕಿ, ಬೇಳೆ, ಗೋಧಿ ಇತ್ಯಾದಿ ಧಾನ್ಯಗಳನ್ನು ಯೋಗ್ಯ ಗೃಹಸ್ಥರಿಗೆ ದಾನಮಾಡುವುದು.
೮. **ಧನದಾನ:** ಯಥಾಶಕ್ತಿ ದಕ್ಷಿಣೆಯನ್ನು ದಾನಮಾಡುವುದು.
೯. **ರೌಪ್ಯದಾನ:** ಬೆಳ್ಳಿಯ ಲೋಟ, ತಂಬಿಗೆ, ಪಂಚಪಾತ್ರೆ, ತಟ್ಟೆಗಳನ್ನು ದಾನಮಾಡುವುದು.
೧೦. **ಲವಣದಾನ:** ಹರಳು ಉಪ್ಪನ್ನು ದಾನಮಾಡುವುದು.

ಸತ್ಪಾತ್ರರಿಗೆ ಇಂಥ ದಾನಗಳನ್ನು ಮಾಡುವುದರಿಂದ ಪಾಪಕ್ಷಯವಾಗುತ್ತದೆ.

21. ಐದು ವೀರವೈಷ್ಣವರು

ದ್ರೋಹಿಗಳಾಗಿದ್ದರೂ ವಿಷ್ಣುಭಕ್ತರಾಗಿರಬಹುದು. ಲೌಕಿಕದೃಷ್ಟಿಯಿಂದ, ವ್ಯಾವಹಾರಿಕದೃಷ್ಟಿಯಿಂದ ಅವರು ದ್ರೋಹಿಗಳಾಗಿ ತೋರಿದರೂ ಅವರು ವೀರ ವೈಷ್ಣವರೇ ಆಗಿದ್ದಾರೆ ಎಂದು ಈ ಕೆಳಗಿನ ಶ್ಲೋಕವು ಹೇಳುತ್ತದೆ. ಅವರು ಐದು ಜನಗಳಂತೆ:

ಮಾತೃದ್ರೋಹೀ ಪಿತೃದ್ರೋಹೀ ಭ್ರಾತೃದ್ರೋಹೀ ತಥೈವ ಚ।
ಸ್ವಾಮಿದ್ರೋಹೀ ಗುರುದ್ರೋಹೀ "ಪಂಚೈತೇ ವೀರವೈಷ್ಣವಾಃ"॥

ಮಾತೃದ್ರೋಹಿ, ಪಿತೃದ್ರೋಹಿ, ಭ್ರಾತೃದ್ರೋಹಿ, ಸ್ವಾಮಿದ್ರೋಹಿ ಮತ್ತು ಗುರುದ್ರೋಹಿ; ಈ ಐವರೂ ಮಹಾವಿಷ್ಣುವಿನ ಪರಮಭಕ್ತರು! ಇದು ಹೇಗೆಂಬುದನ್ನು ನೋಡೋಣ:

ಮಾತೃದ್ರೋಹಿ ಎಂದರೆ ತಾಯಿಗೇ ದ್ರೋಹವನ್ನು ಎಸಗಿದವನು. ಅವನು ಯಾರೆಂದರೆ: **ಪರಶುರಾಮ**. ತನ್ನ ತಂದೆಯ ಆಜ್ಞೆಯಂತೆ ತಾಯಿಯನ್ನು ತನ್ನ ಪರಶುವಿನಿಂದ ಕೊಂದುಹಾಕಿದ ಪರಶುರಾಮನು ಮಾತೃದ್ರೋಹಿಯಲ್ಲವೇ? ಆದರೂ ಇವನು ಶ್ರೀವಿಷ್ಣುವಿನ ಅವತಾರಿಯಲ್ಲವೇ?

ಪಿತೃದ್ರೋಹಿ ಎಂದರೆ ತಂದೆಗೇ ದ್ರೋಹವನ್ನು ಮಾಡಿದ ಮಗ. ಅವನೇ **ಪ್ರಹ್ಲಾದ**. ಪ್ರಹ್ಲಾದನು ತನ್ನ ತಂದೆಗೆ ದ್ರೋಹವನ್ನು ಮಾಡಿದ ಪುತ್ರನಲ್ಲವೇ? ಹೌದು, ದಿಟ; ಆದರೆ ಪ್ರಹ್ಲಾದನು ಪರಮಭಾಗವತೋತ್ತಮನೇ ಅಲ್ಲವೇ?

ಭ್ರಾತೃದ್ರೋಹಿ ಎಂದರೆ ಅಣ್ಣನಿಗೇ ದ್ರೋಹವನ್ನು ಬಗೆದವನು. ಅವನೇ **ವಿಭೀಷಣ**. ವೀಭೀಷಣನು ತನ್ನ ಅಣ್ಣನಾದ ರಾವಣನಿಗೇ ದ್ರೋಹವನ್ನು ಬಗೆದನಲ್ಲವೇ? ಆದರೇನಂತೆ? ವಿಭೀಷಣನು ಭಕ್ತಾಗ್ರಣಿಯೇ ಆಗಿದ್ದಾನೆ.

ಸ್ವಾಮಿದ್ರೋಹಿ ಎಂದರೆ ತನ್ನ ಸ್ವಾಮಿಗೇ ದ್ರೋಹವನ್ನು ಮಾಡಿದವನು. ಅವನಾರೆಂದರೆ **ಭೀಷ್ಮಾಚಾರ್ಯ**. ದುರ್ಯೋಧನನೇ ಭೀಷ್ಮರಿಗೆ ಸ್ವಾಮಿ. ಆದರೆ ಭೀಷ್ಮಾಚಾರ್ಯರು ಪಾಂಡವರ ಪಕ್ಷಪಾತಿಗಳಾಗಿಬಿಟ್ಟಿದ್ದರಲ್ಲವೇ? ಹೀಗಾಗಿ ಇವರು ಸ್ವಾಮಿದ್ರೋಹಿ. ಆದರೂ ಭೀಷ್ಮರು ಪರಮಭಾಗವತೋತ್ತಮರೇ ಅಲ್ಲವೇ?

ಗುರುದ್ರೋಹಿ ಎಂದರೆ ತನ್ನ ಗುರುವಿಗೇ ದ್ರೋಹವನ್ನು ಮಾಡಿದವನು. ಅವನೇ **ಬಲಿಚಕ್ರವರ್ತಿ**. ಬೇಡಬೇಡವೆಂದರೂ ತನ್ನ ಗುರು ಶುಕ್ರಾಚಾರ್ಯರ ಮಾತನ್ನು ತಿರಸ್ಕರಿಸಿ ದಾನಮಾಡಿದ ವಿಷ್ಣುಭಕ್ತನೆಂದರೆ ಬಲಿಚಕ್ರವರ್ತಿಯು. ಇವನೂ ವೀರವೈಷ್ಣವನೇ ಅಲ್ಲವೇ?

22. ಮೂರು ವೇದಾಂತಪ್ರಸ್ಥಾನಗಳು

ವೇದಾಂತದರ್ಶನಕ್ಕೆ ಪ್ರಮಾಣಭೂತವಾದ ಗ್ರಂಥಗಳು ಒಟ್ಟಾಗಿ ಮೂರು. ಅವುಗಳಿಗೆ **ವೇದಾಂತ ಪ್ರಸ್ಥಾನತ್ರಯ ಗ್ರಂಥಗಳು** ಎಂದು ಹೆಸರಿದೆ. ಅವುಗಳಾವುವೆಂದರೆ:

ಈಶಾದಿದಶವೇದಾಂತಾಃ ಕೃಷ್ಣಗೀತಾಸ್ತಥೈವ ಚ।
ವ್ಯಾಸಸ್ಯ ಬ್ರಹ್ಮಸೂತ್ರಾಣಿ "ಪ್ರಸ್ಥಾನತ್ರಯಮುಚ್ಯತೇ"॥

ಈಶಾದಿದಶೋಪನಿಷತ್ತುಗಳು, ಶ್ರೀಕೃಷ್ಣಭಗವಂತನ ಭಗವದ್ಗೀತೆ, ಭಗವಾನ್ ವೇದವ್ಯಾಸರ ಬ್ರಹ್ಮಸೂತ್ರಗಳು—ಈ ಮೂರಕ್ಕೆ **ಪ್ರಸ್ಥಾನತ್ರಯ** ಎಂದು ಹೆಸರು.

I. ಈಶಾದಿದಶ ಉಪನಿಷತ್ತುಗಳು **ಶ್ರುತಿಪ್ರಸ್ಥಾನ**.

೧. **ಈಶಾವಾಸ್ಯೋಪನಿಷತ್:**
ಶುಕ್ಲಯಜುರ್ವೇದಸಂಹಿತೆಯ ಭಾಗವಿದು.

೨. **ಕೇನೋಪನಿಷತ್:** ಸಾಮವೇದದ ತಲವಕಾರಶಾಖೆಗೆ ಸೇರಿದೆ.

೩. **ಕಾಠಕೋಪನಿಷತ್:** ಕೃಷ್ಣಯಜುರ್ವೇದದ ಕಾಠಕಶಾಖೆಗೆ ಸೇರಿದೆ.

೪. **ಮುಂಡಕೋಪನಿಷತ್:** ಅಥರ್ವವೇದದ ಮಂತ್ರಭಾಗಕ್ಕೆ ಸೇರಿದೆ.

೫. **ಪ್ರಶ್ನೋಪನಿಷತ್:** ಅಥರ್ವವೇದದ ಬ್ರಾಹ್ಮಣಭಾಗಕ್ಕೆ ಸೇರಿದೆ.

೬. **ಮಾಂಡೂಕ್ಯೋಪನಿಷತ್:** ಅಥರ್ವವೇದದ ಮಂತ್ರಭಾಗಕ್ಕೆ ಸೇರಿದೆ.

೭. **ತೈತ್ತಿರೀಯೋಪನಿಷತ್:** ಕೃಷ್ಣಯಜುರ್ವೇದದ ಆರಣ್ಯಕಭಾಗಕ್ಕೆ ಸೇರಿದೆ.

೮. **ಐತರೇಯೋಪನಿಷತ್:** ಋಗ್ವೇದದ ಬ್ರಾಹ್ಮಣಭಾಗಕ್ಕೆ ಸೇರಿದೆ.

೯. **ಛಾಂದೋಗ್ಯೋಪನಿಷತ್:** ಸಾಮವೇದದ ತಾಂಡ್ಯಶಾಖೆಗೆ ಸೇರಿದ್ದು.

೧೦. **ಬೃಹದಾರಣ್ಯಕೋಪನಿಷತ್:** ಶುಕ್ಲಯಜುರ್ವೇದದ ಶತಪಥಬ್ರಾಹ್ಮಣಕ್ಕೆ ಸೇರಿದೆ.

II. **ಶ್ರೀಮದ್ಭಗವದ್ಗೀತಾ:** ಇದು ವೇದಾಂತದ **ಸ್ಮೃತಿಪ್ರಸ್ಥಾನ**. ಇದರಲ್ಲಿ ಸಾಧನಗಳನ್ನೂ ತಿಳಿಸಿರುವುದರಿಂದ ಇದು **ಸಾಧನಪ್ರಸ್ಥಾನವೂ** ಹೌದು.

III. **ಬ್ರಹ್ಮಸೂತ್ರಗಳು:** ವೇದವ್ಯಾಸರಿಂದ ರಚಿತವಾಗಿರುವ ವೇದಾಂತ ಮೀಮಾಂಸಾ ಶಾಸ್ತ್ರ. ಇದಕ್ಕೆ **ವೇದಾಂತನ್ಯಾಯಪ್ರಸ್ಥಾನ** ಎಂದು ಹೆಸರು.

ಈ ಪ್ರಸ್ಥಾನತ್ರಯಗ್ರಂಥಗಳನ್ನು ಮುಮುಕ್ಷುಗಳು ಅಧ್ಯಯನಮಾಡಬೇಕು.

23. ನವ ಕಾವ್ಯರಸಗಳು

ಕವಿಗಳು ತಮ್ಮ ಕಾವ್ಯ, ನಾಟಕಗ್ರಂಥಗಳಲ್ಲಿ ವಸ್ತುಗಳನ್ನು ಸುಂದರವಾಗಿ ಹಾಗೂ ಚಮತ್ಕಾರವಾಗಿ ವರ್ಣಿಸುತ್ತಾರೆ. ಆಯಾ ಕಥಾಸಂದರ್ಭಕ್ಕೆ ತಕ್ಕಂತೆ **ನವರಸ**ಗಳನ್ನು ಅಲ್ಲಲ್ಲಿ ತರುತ್ತಾರೆ. ಆಗಲೇ ಓದುಗರಿಗೆ ರಸಾಸ್ವಾದದ ಅನುಭವವು ಉಂಟಾಗುತ್ತದೆ. ಆ ಒಂಬತ್ತು ರಸಗಳು ಯಾವುವು ಎಂದರೆ:

ಶೃಂಗಾರ ವೀರ ಕರುಣಾದ್ಭುತ ಹಾಸ್ಯ ಭಯಾನಕಾಃ।
ಬೀಭತ್ಸರೌದ್ರೌ ಶಾಂತಶ್ಚ "ನವೈತೇ ಕಥಿತಾ ರಸಾಃ"॥

ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ, ರೌದ್ರ, ಶಾಂತ—ಎಂದು ಕಾವ್ಯನಾಟಕಗಳಲ್ಲಿ ಒಂಬತ್ತು ರಸಗಳಿರುತ್ತವೆ.

೧. **ಶೃಂಗಾರರಸ:** ಪುರುಷರ ಮನಸ್ಸಿನಲ್ಲಿ ಸ್ತ್ರೀಯರ ವಿಷಯದಲ್ಲಿ ಹೆಚ್ಚಿನ ಅನುರಾಗವು ಉಂಟಾಗುವಂತೆ ಮಾಡುವ ಕಾವ್ಯಶೃಂಗಾರದ ರಸ.

೨. **ವೀರರಸ:** ಎಂಥಾ ಹೇಡಿಗೂ, ಸೋಮಾರಿಗೂ ಉತ್ಸಾಹವು ಹಾಗೂ ಶೌರ್ಯವು ಉಂಟಾಗುವಂತೆ ವರ್ಣಿತವಾಗುವ ರಾಜಸಿಕಸ್ವಭಾವದ ರಸ.

೩. **ಕರುಣರಸ:** ಕಠಿಣ ಮನಸ್ಸಿನವರಿಗೂ ಮತ್ತು ಶುಷ್ಕಮನಸ್ಸಿನವರಿಗೂ ಮನಸ್ಸನ್ನು ಕರಗಿಸುವಂಥ, ದಯೆಯನ್ನು ಉಂಟುಮಾಡುವಂಥ ರಸ.

೪. **ಅದ್ಭುತರಸ:** ಕೇಳುವವರ ಹಾಗೂ ನೋಡುವವರ ಮನಸ್ಸಿನಲ್ಲಿ ಆಶ್ಚರ್ಯ ವನ್ನುಂಟುಮಾಡಿ ಅವರನ್ನು ಜಾಡ್ಯದಿಂದ ಎದ್ದೇಳುವಂತೆ ಮಾಡುವ ರಸ.

೫. **ಹಾಸ್ಯರಸ:** ನಿದ್ರೆಮಾಡುತ್ತಿರುವಂಥವರನ್ನೂ ಎಬ್ಬಿಸಿ, ಒರಟುಸ್ವಭಾವ ದವರನ್ನೂ ನಗಿಸುವಂಥ ತಮಾಷೆಯರೂಪದ ವಿನೋದಪೂರ್ಣರಸ.

೬. **ಭಯಾನಕರಸ:** ಶಾಂತಮನಸ್ಕರಿಗೂ, ವಿರಕ್ತರಾದ ಸಂನ್ಯಾಸಿಗಳಿಗೂ ಭಯವನ್ನು ಉಂಟುಮಾಡುವ ಕಥಾಪ್ರಸಂಗದ ರಸ.

೭. **ಬೀಭತ್ಸ:** ಕೇಳುವುದಕ್ಕೂ ನೋಡುವುದಕ್ಕೂ ಇಷ್ಟವಾಗದಂಥ, ಸಾಕಪ್ಪಾ ಸಾಕು ಎಂದೆನಿಸುವ ಜುಗುಪ್ಸೆಯ ರಸ.

೮. **ರೌದ್ರರಸ:** ರುದ್ರನ ಭಯಂಕರ, ಪ್ರಳಯಾಂತಕ ಘೋರದೃಶ್ಯದ ರಸ. ರೌದ್ರರಸದಿಂದ ಎಂಥವನಿಗೂ ಗಾಬರಿಯಾಗುವಂತಾಗುತ್ತದೆ.

೯. **ಶಾಂತರಸ:** ಮನಸ್ಸಿಗೆ ನೆಮ್ಮದಿ-ಶಾಂತಿ ಸಂತೋಷ ತೃಪ್ತಿ ಆನಂದಗಳನ್ನು ಉಂಟುಮಾಡುವ ಸಾತ್ತ್ವಿಕಪ್ರಸಂಗದ ರಸ.

ಹೀಗೆ ಕಾವ್ಯನಾಟಕಗಳಲ್ಲಿ **ಒಂಬತ್ತು** ರಸಗಳಿರುತ್ತವೆ.

24. ಪಂಚ ಮಹಾಯಜ್ಞಗಳು

ಯಜ್ಞ ಎಂದರೆ ಪೂಜೆ, ಆರಾಧನೆ, ಸೇವೆ ಎಂದರ್ಥವಾಗುತ್ತದೆ. ಗೃಹಸ್ಥನಾದವನು ಪ್ರತಿದಿನವೂ ತಪ್ಪದೇ **ಪಂಚ ಮಹಾಯಜ್ಞ**ಗಳನ್ನು ಮಾಡಬೇಕೆಂದು ಶಾಸ್ತ್ರಗಳು ವಿಧಿಸುತ್ತವೆ. ಈ ಪಂಚಯಜ್ಞಗಳ ಅನುಷ್ಠಾನದಿಂದ ಸಕಲಪಾಪಗಳೂ ದೂರವಾಗಿ, ಗೃಹಸ್ಥನಿಗೆ ಮರಣಾನಂತರ ಸ್ವರ್ಗಲೋಕವೇ ಪ್ರಾಪ್ತವಾಗುತ್ತದೆ ಎಂದು ವೇದಶಾಸ್ತ್ರಪುರಾಣಗಳಲ್ಲಿ ಹೇಳಿದೆ. ಆ **ಪಂಚ ಮಹಾಯಜ್ಞ**ಗಳು ಈ ಕೆಳಗಿನಂತಿವೆ:

ದೇವಯಜ್ಞಃ ಪಿತೃಯಜ್ಞೋ ಬ್ರಹ್ಮಯಜ್ಞಸ್ತಥೈವ ಚ ।
ನೃಯಜ್ಞೋ ಭೂತಯಜ್ಞಶ್ಚ "ಪಂಚ ಯಜ್ಞಾಃ ಪ್ರಕೀರ್ತಿತಾಃ" ॥

೧. **ದೇವಯಜ್ಞ** ಎಂದರೆ ದೇವತಾರಾಧನೆ. ಗೃಹಸ್ಥನಾದವನು ಪ್ರತಿದಿನವೂ ಅಗ್ನಿಹೋತ್ರಾನುಷ್ಠಾನವನ್ನು ಮಾಡುತ್ತಾ ದೇವತೆಗಳನ್ನು ಸಂತೋಷಪಡಿಸಬೇಕು. ದೇವತೆಗಳ ಆರಾಧನೆಯಿಂದ ಗೃಹಸ್ಥನಿಗೆ ಸಕಲ ಸಂಪತ್ತುಗಳೂ ಲಭಿಸುತ್ತವೆ.

೨. **ಪಿತೃಯಜ್ಞ** ಎಂದರೆ ಪಿತೃಗಳನ್ನು ಆರಾಧಿಸುವುದು. ಸೋಮಃ ಪಿತೃಮಾನ್ ಯಮಾಂಗಿರಸ್ವಾನ್ ಮುಂತಾದ ಪಿತೃದೇವತೆಗಳನ್ನು ಕುರಿತು ಗೃಹಸ್ಥನು ಪ್ರತಿದಿನವೂ ತರ್ಪಣವನ್ನು ಕೊಡಬೇಕು. ಇದು **ಪಿತೃಯಜ್ಞ.**

೩. **ಬ್ರಹ್ಮಯಜ್ಞ** ಎಂದರೆ ವೇದಾಧ್ಯಯನ. ಗುರುಗಳಿಂದ ತಾನು ಕಲಿತಿರುವ ವೇದಮಂತ್ರಗಳನ್ನು ಗೃಹಸ್ಥನು ಪ್ರತಿದಿನವೂ ಪಾರಾಯಣ ಮಾಡಲೇಬೇಕು. ಅಧ್ಯಯನಮಾಡಿರುವ ಮಂತ್ರಗಳನ್ನು ಮರೆಯಲೇಬಾರದು. ಇಲ್ಲಿ ಬ್ರಹ್ಮ ಎಂದರೆ ವೇದ. ಬ್ರಹ್ಮಯಜ್ಞಕ್ಕೇ ಋಷಿಯಜ್ಞ ಎಂದೂ ಹೆಸರು. ಋಷಿತರ್ಪಣವನ್ನೂ ಪ್ರತಿದಿನವೂ ಗೃಹಸ್ಥನು ಮಾಡಲೇಬೇಕು.

೪. **ನೃಯಜ್ಞ** ಎಂದರೆ ಮನುಷ್ಯಯಜ್ಞ. ಅತಿಥಿಅಭ್ಯಾಗತರಿಗೆ ಸತ್ಕಾರವನ್ನು ಮಾಡುತ್ತಾ, ಅವರನ್ನು ಪೂಜಿಸುತ್ತಾ ಇರುವುದೇ **ನೃಯಜ್ಞ.**

೫. **ಭೂತಯಜ್ಞ** ಎಂದರೆ ಪಿಪೀಲಿಕಾದಿ ಸಮಸ್ತ ಪ್ರಾಣಿಗಳಿಗೂ ಅನ್ನವನ್ನು ಹಾಕಿ ಅವುಗಳನ್ನು ಸಂತೋಷಪಡಿಸಬೇಕು. ನಾಯಿ, ಬೆಕ್ಕು, ಇರುವೆ, ಹಸು, ಎಮ್ಮೆ—ಮುಂತಾದ ಪಶುಪ್ರಾಣಿಗಳಲ್ಲಿಯೂ ಭಗವಂತನನ್ನೇ ಕಾಣುವುದು ಎಂದಭಿಪ್ರಾಯ.

ಗೃಹಸ್ಥನಿಗೆ ಈ **ಐದೂ ಯಜ್ಞಗಳು** ಶಾಸ್ತ್ರವಿಹಿತವಾಗಿರುತ್ತವೆ.

25. ದಂಡಕ್ಕೆ ದಶ ಗುಣಗಳು

"ದಂಡಂ ದಶಗುಣಂ ಭವೇತ್" ಎಂಬ ಈ ವಾಕ್ಯವು ಪ್ರಸಿದ್ಧವಾಗಿರುತ್ತದೆ. ಶ್ಲೋಕದ ನಾಲ್ಕನೆಯ ಪಾದವಿದು. ಇದರ ಹಿಂದೆ ಮೂರು ಪಾದಗಳಿರುತ್ತವೆ. ಇದರ ಪೂರ್ಣಶ್ಲೋಕವನ್ನೂ ಅದರ ಅರ್ಥವನ್ನೂ ನಾವೀಗ ನೋಡೋಣ:

ವಿಶ್ವಾಮಿತ್ರಾಹಿಪಶುಷು ಕರ್ದಮೇಷು ಜಲೇಷು ಚ।
ಅಂಧೇ ತಮಸಿ ವಾರ್ಧಕ್ಯೇ "ದಂಡಂ ದಶಗುಣಂ ಭವೇತ್"॥

ಈ ಶ್ಲೋಕದ ಶಬ್ದವಿಭಾಗವನ್ನು ನಾವು ಸರಿಯಾಗಿ ಮಾಡಿಕೊಳ್ಳಬೇಕು.

ವಿ + ಶ್ವಾ + ಅಮಿತ್ರ + ಅಹಿ + ಪಶುಷು ಕರ್ದಮೇಷು ಜಲೇಷು ಚ।
ಅಂಧೇ ತಮಸಿ ವಾರ್ಧಕ್ಯೇ ದಂಡಂ ದಶಗುಣಂ ಭವೇತ್॥

೧. ವಿ ಎಂದರೆ ಪಕ್ಷಿಗಳು. ಪಕ್ಷಿಗಳನ್ನು ಓಡಿಸುವುದಕ್ಕೆ ದಂಡವು ಸಹಕಾರಿ.

೨. **ಶ್ವಾ** ಎಂದರೆ ನಾಯಿಗಳು. ಕಚ್ಚಲು ಹತ್ತಿರಕ್ಕೆ ಬಂದ ನಾಯಿಗಳನ್ನು ಓಡಿಸಲೂ ದಂಡವು ಬೇಕಲ್ಲವೇ?

೩. **ಅಮಿತ್ರ** ಎಂದರೆ ಶತ್ರುಗಳು. ಶತ್ರುಗಳನ್ನೂ ಮತ್ತು ಕಳ್ಳರನ್ನೂ ಹೊಡೆದೋಡಿಸಲು ದಂಡವು ಸಹಾಯಕವಾಗುತ್ತದೆಯಲ್ಲವೆ?

೪. **ಅಹಿ** ಎಂದರೆ ಸರ್ಪಗಳು. ಹಾವುಗಳನ್ನು ಓಡಿಸುವುದಕ್ಕೂ ಮತ್ತು ಹಿಡಿಯುವುದಕ್ಕೂ ದಂಡವು ಬೇಕಲ್ಲವೆ?

೫. **ಪಶುಷು** ಎಂದರೆ ಪಶುಗಳನ್ನು ಅಟ್ಟಬೇಕಾದರೂ ದಂಡವು ಬೇಕು. ನಾಯಿ, ಕತ್ತೆ, ಕುದುರೆ, ಹಸುಗಳನ್ನು ಹೊಡೆದೋಡಿಸುವುದಕ್ಕೂ ದಂಡವು ಬೇಕಲ್ಲವೆ?

೬. **ಕರ್ದಮೇಷು** ಎಂದರೆ ಕೆಸರುಗುಂಡಿಗಳು. ಕೋಲಿನ ಸಹಾಯದಿಂದ ಕೆಸರಿನ ಗುಂಡಿಗಳನ್ನು ಸುಲಭವಾಗಿ ದಾಟಬಹುದಲ್ಲವೆ?

೭. **ಜಲೇಷು** ಎಂದರೆ ನೀರಿರುವ ಗುಂಡಿಗಳು. ನೀರಿನಿಂದ ತುಂಬಿರುವ, ಜಾರುವ ಸ್ಥಳಗಳನ್ನು ದಾಟುವುದಕ್ಕೂ ದಂಡವು ಸಹಕಾರಿಯಲ್ಲವೆ?

೮. **ಅಂಧೇ** ಎಂದರೆ ಕುರುಡುತನ. ಕುರುಡರಿಗೂ ರಸ್ತೆಗಳಲ್ಲಿ ಸಂಚರಿಸುವಾಗ ಕೋಲು ಸಹಾಯಕವಾಗುತ್ತದೆ.

೯. **ತಮಸಿ** ಎಂದರೆ ಕತ್ತಲೆಯಲ್ಲಿ. ಕತ್ತಲಲ್ಲಿ ಕೋಲಿದ್ದರೆ ಒಳ್ಳೆಯದಲ್ಲವೆ?

೧೦. **ವಾರ್ಧಕ್ಯೇ** ಎಂದರೆ ಮುಪ್ಪಿನಲ್ಲಿ. ವೃದ್ಧರಿಗಂತೂ ದಂಡವು ಬೇಕೇಬೇಕು.

ಹೀಗೆ ದಂಡದಿಂದ **ಹತ್ತು** (ಗುಣಗಳು) ಪ್ರಯೋಜನಗಳುಂಟು.

26. ಹತ್ತು ಅವತಾರಗಳು

ಲೋಕಕಲ್ಯಾಣಕ್ಕಾಗಿ ಮಹಾವಿಷ್ಣುವು ಅನೇಕ ಅವತಾರಗಳನ್ನು ಎತ್ತಿರುತ್ತಾನೆ. **'ಅವತಾರ'** ಎಂದರೆ ತನ್ನ ಇಚ್ಛೆಯಂತೆ, ತನಗೆ ಬೇಕಾದ ನಾಮರೂಪಗಳಿಂದ ಸ್ವತಂತ್ರನಾಗಿ ತೋರಿಕೊಳ್ಳುವುದು. ಇಂಥ **ಅವತಾರಗಳು ಹತ್ತು** ಎಂದು ಈ ಕೆಳಗಿನ ಶ್ಲೋಕದಲ್ಲಿ ಪಟ್ಟಿಹಾಕಲಾಗಿದೆ:

ಮತ್ಸ್ಯಃ ಕೂರ್ಮೋ ವರಾಹಶ್ಚ ನಾರಸಿಂಹಶ್ಚ ವಾಮನಃ।
ರಾಮೋ ರಾಮಶ್ಚ ಕೃಷ್ಣಶ್ಚ ಬೌದ್ಧಃ ಶ್ರೀಕಲ್ಕಿರೇವ ಚ॥

೧. **ಮತ್ಸ್ಯಾವತಾರ:** ಎಂದರೆ ಮೀನಿನ ಅವತಾರ. ಭಗವಂತನು ಸಮುದ್ರದೊಳಗೆ ಅಡಕವಾಗಿದ್ದ ವೇದಗಳನ್ನು ಮೀನಿನ ರೂಪದಿಂದ ಅವತರಿಸಿ ಉದ್ಧಾರಮಾಡಿದನು.

೨. **ಕೂರ್ಮಾವತಾರ:** ಎಂದರೆ ಆಮೆಯ ಅವತಾರ. ಸಮುದ್ರದಲ್ಲಿ ಮುಳುಗಿ ಹೋಗಿದ್ದ ಮಂದರಪರ್ವತವನ್ನು ಭಗವಂತನು ಆಮೆಯಾಗಿ ಅವತರಿಸಿ ಮೇಲಕ್ಕೆ ಎತ್ತಿದನು.

೩. **ವರಾಹಾವತಾರ:** ಎಂದರೆ ಹಂದಿಯ ಅವತಾರ. ಹಿರಣ್ಯಾಕ್ಷನೆಂಬ ರಾಕ್ಷಸನನ್ನು ಸಂಹರಿಸಿ, ರಸಾತಳದಲ್ಲಿ ಮುಳುಗಿಹೋಗಿದ್ದ ಭೂಮಿಯನ್ನು ಭಗವಂತನು ಹಂದಿಯ ರೂಪದಿಂದ ಅವತರಿಸಿ, ತನ್ನ ಕೋರೆದಾಡೆಗಳಿಂದ ಮೇಲಕ್ಕೆ ತಂದುಕೊಟ್ಟನು.

೪. **ನರಸಿಂಹಾವತಾರ:** ಎಂದರೆ ಅರ್ಧಭಾಗಮನುಷ್ಯನಾಗಿ, ಇನ್ನರ್ಧಭಾಗ ಸಿಂಹವಾಗಿ ಅವತರಿಸಿ ದುಷ್ಟನಾದ ಹಿರಣ್ಯಕಶಿಪು ಎಂಬ ರಾಕ್ಷಸನನ್ನು ಸಂಹರಿಸಿ ಭಕ್ತಪ್ರಹ್ಲಾದನನ್ನು ಉದ್ಧಾರಮಾಡಿದನು.

೫. **ವಾಮನಾವತಾರ:** ಎಂದರೆ ಕುಳ್ಳಗಿರುವ ಬ್ರಹ್ಮಚಾರಿಯ ಅವತಾರದಿಂದ. ದರ್ಪಿಷ್ಠನಾಗಿದ್ದ ಬಲೀಂದ್ರನ ದರ್ಪವನ್ನು ಭಗವಂತನು ನಾಶಮಾಡಿದನು.

೬. **ಪರಶುರಾಮಾವತಾರ:** ಕ್ಷತ್ರಿಯರ ದರ್ಪವನ್ನು ನಾಶಮಾಡಿದನು.

೭. **ಶ್ರೀರಾಮಾವತಾರ:** ದಶರಥನ ಸುಪುತ್ರನಾಗಿ ಶ್ರೀರಾಮಚಂದ್ರನಾಗಿ ಸತ್ಯಧರ್ಮಗಳನ್ನು ಜಗತ್ತಿಗೆ ಉಪದೇಶಿಸಿದ ಅವತಾರ.

೮. **ಶ್ರೀಕೃಷ್ಣಾವತಾರ:** ಜಗದ್ಗುರುವಾಗಿ ಗೀತೆಯನ್ನು ಜಗತ್ತಿಗೆ ಕೊಟ್ಟ ಅವತಾರ.

೯. **ಬೌದ್ಧಾವತಾರ:** ತ್ಯಾಗ, ಅಹಿಂಸೆಗಳನ್ನು ಬೋಧಿಸುವ ಅವತಾರ.

೧೦. **ಶ್ರೀಕಲ್ಕಿ ಅವತಾರ:** ದುಷ್ಟರನ್ನು ಸಂಹರಿಸಿದ, ಜಗತ್ತಿಗೆ ಶಾಂತಿಯನ್ನು ಕೊಡುವ ಅವತಾರ. ಹೀಗೆ **ಹತ್ತು** ಅವತಾರಗಳು.

27. ಹತ್ತು ಧರ್ಮಲಕ್ಷಣಗಳು

ಸಮಾಜಕ್ಕೂ ತನಗೂ ನೆಮ್ಮದಿಯನ್ನು ಉಂಟುಮಾಡುವ ಅನುಷ್ಠಾನಕ್ಕೇ **ಧರ್ಮ** ಎಂದು ಹೆಸರು. **ಧಾರಣಾತ್ ಧರ್ಮಃ**. ಧರ್ಮಕ್ಕೆ ಅನೇಕ ಲಕ್ಷಣಗಳು ಹಾಗೂ ನೂರಾರು ಮುಖಗಳು ಇದ್ದರೂ ಈ ಕೆಳಗಿನ ಶ್ಲೋಕದಲ್ಲಿ ಧರ್ಮದ ಹತ್ತು ಲಕ್ಷಣಗಳನ್ನು ತಿಳಿಸಿದೆ:

ಧೃತಿಃ ಕ್ಷಮಾ ದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ।
ಧೀರ್ವಿದ್ಯಾ ಸತ್ಯಮಕ್ರೋಧಃ "ದಶಕಂ ಧರ್ಮಲಕ್ಷಣಮ್"॥

೧. **ಧೃತಿಃ** ಎಂದರೆ ಧೈರ್ಯ. ಎಂಥಾ ಕಷ್ಟಸಮಯದಲ್ಲಿಯೂ ಎದೆಗುಂದದೇ ಧೈರ್ಯವಾಗಿರುವುದು. ಅನ್ಯಾಯದ, ಅಧರ್ಮದ ಹಾಗೂ ಅನೃತದ ಮಾರ್ಗವನ್ನು ತುಳಿಯದೇ ಎದೆಗಾರಿಕೆಯಿಂದ ಸತ್ಯನ್ಯಾಯಮಾರ್ಗದಲ್ಲಿಯೇ ಪ್ರವೃತ್ತನಾಗುವುದು.

೨. **ಕ್ಷಮಾ** ಎಂದರೆ ಕ್ಷಮಿಸುವ ಗುಣ. ಇತರರು ತಪ್ಪನ್ನು ಮಾಡಿದಾಗ ಅದನ್ನು ಎಣಿಸದೇ ಅವರನ್ನು ಸಂತೋಷದಿಂದ ಕ್ಷಮಿಸಿಬಿಡುವ ದೊಡ್ಡಗುಣ.

೩. **ದಮ** ಎಂದರೆ ಶಾಂತನಾಗಿ ಇರುವ ಸೌಜನ್ಯದ ಸದ್ಗುಣ. ಮನಸ್ಸಿನಲ್ಲಿ ರಾಗದ್ವೇಷಗಳಿಲ್ಲದಂತೆ ಜೀವನವನ್ನು ನಡೆಸುವ ದೊಡ್ಡತನ.

೪. **ಅಸ್ತೇಯ** ಎಂದರೆ ಕಳ್ಳತನಮಾಡದಿರುವ ಸ್ವಭಾವ. ಪರರ ಪದಾರ್ಥವನ್ನು ಹುಲ್ಲುಕಡ್ಡಿಗಿಂತಲೂ ಕೀಳಾಗಿ ನೋಡುವ ಸ್ವಭಾವ.

೫. **ಶೌಚಂ** ಎಂದರೆ ಒಳಗೂ ಹೊರಗೂ ಶುದ್ಧವಾಗಿರುವ ಸ್ವಭಾವ.

೬. **ಇಂದ್ರಿಯನಿಗ್ರಹ** ಎಂದರೆ ಇಂದ್ರಿಯಗಳ ಮೇಲೆ ಹತೋಟಿ ಇರುವುದು. ಸಾತ್ತ್ವಿಕವಿಷಯಗಳನ್ನೇ ಇಂದ್ರಿಯಗಳಿಂದ ಅನುಭವಿಸುವ ಜಾಣತನ.

೭. **ಧೀಃ** ಎಂದರೆ ವಿವೇಕಯುಕ್ತವಾದ ಬುದ್ಧಿ. ವಿವೇಕರಹಿತನಾಗಿ ಯಾವ ತಪ್ಪನ್ನೂ ಎಂದಿಗೂ ಮಾಡದಂತೆ ಎಚ್ಚರವಹಿಸುವುದು.

೮. **ವಿದ್ಯಾ** ಎಂದರೆ ಜ್ಞಾನಾರ್ಜನೆಯನ್ನು ಮಾಡುತ್ತಾ ಇರುವುದು.

೯. **ಸತ್ಯಮ್** ಎಂದರೆ ಎಂದೆಂದಿಗೂ ಸುಳ್ಳನ್ನು ಹೇಳದೇ ಇರುವುದು.

೧೦. **ಅಕ್ರೋಧಃ** ಎಂದರೆ ವೃಥಾ ಕೋಪವನ್ನು ಮಾಡಿಕೊಳ್ಳದಿರುವುದು.

ಈ **ಹತ್ತು** ಧರ್ಮದ ಗುಣಗಳನ್ನು ಮಾನವರು ಅಭ್ಯಾಸಮಾಡಿಕೊಳ್ಳಬೇಕು.

28. ಆರು ಪಾಠಕಾಧಮರು

ವೇದಮಂತ್ರಗಳನ್ನು ಅಡ್ಡಾದಿಡ್ಡಿಯಾಗಿ, ತಮಗೆ ತೋಚಿದಂತೆ ಹೇಳುವವರಿಗೆ **ಪಾಠಕಾಧಮರು** ಎಂದು ಹೆಸರು. ಅಂಥವರು ಆರು ರೀತಿಯಾಗಿರುತ್ತಾರೆ:

ಗೀತೀ ಶೀಘ್ರೀ ಶಿರಃಕಂಪೀ ತಥಾ ಲಿಖಿತಪಾಠಕಃ।
ಅನರ್ಥಜ್ಞೋಽಲ್ಪಕಂಠಶ್ಚ "ಷಡೇತೇ ಪಾಠಕಾಧಮಾಃ"॥

೧. **ಗೀತೀ** ಎಂದರೆ ಗಾನಮಾಡುತ್ತಾ ವೇದಮಂತ್ರಗಳನ್ನು ಪಠಿಸುವವನು. ಉದಾತ್ತಾದಿ ವೈದಿಕಸ್ವರಗಳನ್ನು ಬಿಟ್ಟು ಸಂಗೀತದ ಸ್ವರಗಳನ್ನು ಹಾಕಿಕೊಂಡು ಸಂಗೀತದ ಧಾಟಿಯಲ್ಲಿ ವೇದಮಂತ್ರಗಳನ್ನು ರಾಗವಾಗಿ ಅಧ್ಯಯನಮಾಡುವವನು ಪಾಠಕಾಧಮನೆನಿಸುತ್ತಾನೆ.

೨. **ಶೀಘ್ರೀ** ಎಂದರೆ ಬೇಗಬೇಗನೆ; ಅತಿವೇಗದಿಂದ ಎಂದರೆ ಪದಚ್ಛೇದಗಳನ್ನು ಮಾಡಿಕೊಳ್ಳದೇ ಉದ್ದಕ್ಕೂ ಸುಮ್ಮನೇ ಮಂತ್ರಗಳನ್ನು ಪಾರಾಯಣಮಾಡುವವನು. ಹೀಗೆ ಪಾರಾಯಣ ಮಾಡುವವನೂ ಪಾಠಕಾಧಮನೇ ಆಗಿಬಿಡುತ್ತಾನೆ.

೩. **ಶಿರಃಕಂಪೀ** ಎಂದರೆ ಶಿರವನ್ನು ಅಲ್ಲಾಡಿಸುತ್ತಾ ಪಾರಾಯಣಮಾಡುವವನು. ತಲೆಯನ್ನು ಅಲ್ಲಾಡಿಸುತ್ತಾ ವೇದಮಂತ್ರಗಳನ್ನು ಪಠಿಸಬಾರದು.

೪. **ಲಿಖಿತಪಾಠಕಃ** ಎಂದರೆ ಬರೆದಿರುವಂತೆ ಸುಮ್ಮನೆ ಪಾರಾಯಣ ಮಾಡುವವನು. ಗುರುಗಳಿಂದ ವೇದಮಂತ್ರಗಳನ್ನು ಅಧ್ಯಯನಮಾಡದೇ, ಮುದ್ರಿತ ಗ್ರಂಥಗಳಲ್ಲಿರುವಂತೆ ತಪ್ಪಾಗಿ ಪಾರಾಯಣಮಾಡುವವನೂ ಪಾಠಕಾಧಮನೇ ಆಗಿಬಿಡುತ್ತಾನೆ.

೫. **ಅನರ್ಥಜ್ಞಃ** ಎಂದರೆ ಅರ್ಥವನ್ನೇ ತಿಳಿಯದೇ ಯಾಂತ್ರಿಕವಾಗಿ ಮಂತ್ರಗಳನ್ನು ಹೇಳುವವನೂ ಪಾಠಕಾಧಮನೇ ಅಲ್ಲವೇ? ಬರೀ ಮಂತ್ರಗಳನ್ನು ಗಟ್ಟುಮಾಡಿಕೊಂಡು ಅರ್ಥದ ಕಡೆಗೆ ಲಕ್ಷ್ಯವನ್ನೇ ಕೊಡದೆ ಆ ಮಂತ್ರಗಳನ್ನು ಸುಮ್ಮನೇ ಗಿಳಿಪಾಠದಂತೆ ಪಾರಾಯಣಮಾಡುವವನೂ ಪಾಠಕಾಧಮನೇ ಆಗಿಬಿಡುತ್ತಾನಲ್ಲವೇ?

೬. **ಅಲ್ಪಕಂಠಃ** ಎಂದರೆ ಮೆಲ್ಲನೆಯ ಧ್ವನಿಯಲ್ಲಿ ಹೇಳುವವನು. ಇತರರಿಗಾಗಲೀ ತನಗೇ ಆಗಲೀ ಕೇಳಿಸದಂತೆ ಅಲ್ಪಕಂಠದಿಂದ ಹೇಳುವವನೂ **ಪಾಠಕಾಧಮನೇ** ಆಗಿಬಿಡುತ್ತಾನೆ.

ಆದ್ದರಿಂದ ಈ ಆರು ದೋಷಗಳನ್ನು ಬಿಟ್ಟು ಸರಿಯಾದ ಕ್ರಮದಿಂದಲೇ ಪವಿತ್ರವಾದ ವೇದಮಂತ್ರಗಳನ್ನು ಪಾರಾಯಣಮಾಡಬೇಕೆಂದು ಅಭಿಪ್ರಾಯವು.

29. ನವ ವೈಯ್ಯಾಕರಣರು

ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ್ಯ ಮತ್ತು ಕಲ್ಪಗಳೆಂದು ಆರು ವೇದಾಂಗಗಳು ಇರುತ್ತವೆ. ಇವುಗಳಲ್ಲಿ ವ್ಯಾಕರಣವು **ಮುಖಂ ವ್ಯಾಕರಣಂ ಸ್ಮೃತಮ್** ಎಂಬಂತೆ ವೇದಪುರುಷನಿಗೆ ಮುಖವಾಗಿರುತ್ತದೆ. ವ್ಯಾಕರಣದ ಸಹಾಯವಿಲ್ಲದೇ ವೇದಮಂತ್ರಗಳಿಗೆ ಅರ್ಥವಾಗುವುದೇ ಕಷ್ಟ. ಆದ್ದರಿಂದ ವ್ಯಾಕರಣಶಾಸ್ತ್ರವನ್ನು ಎಲ್ಲರೂ ವಿಶೇಷವಾಗಿ ಅಧ್ಯಯನಮಾಡಲೇ ಬೇಕು.

ವ್ಯಾಕರಣ ಶಾಸ್ತ್ರವೆಂದರೆ ನಮಗೆ ತಿಳಿದಿರುವುದು ಪಾಣಿನಿಮಹರ್ಷಿಗಳ ಪಾಣಿನೀಯ ವ್ಯಾಕರಣ ಮಾತ್ರ. ಹೌದು, ಇದು ಜನಪ್ರಿಯವೂ ಸುಪ್ರಸಿದ್ಧವೂ ಆಗಿರುತ್ತದೆ. ಆದರೆ ಪಾಣಿನಿಮಹರ್ಷಿಗಳು ತಮ್ಮ ಅಷ್ಟಾಧ್ಯಾಯೀ ಸೂತ್ರ ಪಾಠದಲ್ಲಿ ಇನ್ನೂ ಕೆಲವು ವೈಯ್ಯಾಕರಣರನ್ನು ಪರಾಮರ್ಶಿಸಿರುತ್ತಾರೆ. ಅಂದರೆ ಪಾಣಿನೀಯ ವ್ಯಾಕರಣವೇ ಅಲ್ಲದೇ, ಇನ್ನೂ ಕೆಲವು ವ್ಯಾಕರಣಗಳಿದ್ದವು ಎಂದು ತಿಳಿಯುತ್ತದೆಯಲ್ಲವೇ?

ಹೌದು, ಬೇರೆಬೇರೆಯ ವ್ಯಾಕರಣ ಶಾಸ್ತ್ರಗಳೂ ಇದ್ದವು ಎಂದು ಹೇಳುವ ಈ ಕೆಳಗಿನ ಶ್ಲೋಕವು ಪ್ರಸಿದ್ಧವಾಗಿರುತ್ತದೆಯಲ್ಲವೇ?

ಐಂದ್ರಂ ಚಾಂದ್ರಂ ಕಾಶಕೃತ್ಸ್ನಂ ಕೌಮಾರಂ ಶಾಕಟಾಯನಮ್।
ಸಾರಸ್ವತಂ ಚಾಪಿಶಲಂ ಶಾಕಲಂ ಪಾಣಿನೀಯಕಮ್॥

ಐಂದ್ರ, ಚಾಂದ್ರ, ಕಾಶಕೃತ್ಸ್ನ, ಕೌಮಾರ (ಅಥವಾ ವಾಗುರಿ), ಶಾಕಟಾಯನ, ಸಾರಸ್ವತ, ಆಪಿಶಲ, ಶಾಕಲ ಮತ್ತು ಪಾಣಿನೀಯಕ—ಎಂದು ಒಂಬತ್ತು ವ್ಯಾಕರಣಗಳಿದ್ದವು.

ಆಗಿನ ಕಾಲಕ್ಕೆ ಈ ಒಂಬತ್ತು ವ್ಯಾಕರಣಗಳು ಪ್ರಸಿದ್ಧವಾಗಿದ್ದವಂತೆ. ರಾಮಾಯಣದ ಆಂಜನೇಯನು ನವ ವ್ಯಾಕರಣಪಂಡಿತನಾಗಿದ್ದನಂತೆ. ಆದರೆ ಈಗ ಆ ಒಂಬತ್ತೂ ವ್ಯಾಕರಣಗಳು ನಮಗೆ ಉಪಲಬ್ಧವಿಲ್ಲ. ಪರಮೇಶ್ವರನ ಅಂಶಸಂಭೂತರೂ ಪರಮಶಿವನ ಉಪಾಸಕರೂ ಆದ ಪಾಣಿನಿ ಮಹರ್ಷಿಗಳು ಮಹೇಶ್ವರನ ಹದಿನಾಲ್ಕು ಸೂತ್ರಗಳ ಆಧಾರದಿಂದ ಅಷ್ಟಾಧ್ಯಾಯೀ ಸೂತ್ರಗಳನ್ನು ರಚಿಸಿರುತ್ತಾರೆ. ಇದಕ್ಕೆ **ಪಾಣಿನೀಯ ವ್ಯಾಕರಣ ಶಾಸ್ತ್ರ** ಎಂದೇ ಹೆಸರಾಗಿದೆ. ಇದಕ್ಕೆ **ಪದಶಾಸ್ತ್ರ**ವೆಂದೂ ಹೆಸರು. ಪದಶಾಸ್ತ್ರದ ಅರಿವಿಲ್ಲದವನನ್ನು **ಅಂಧ** ಎಂದೇ ಪಂಡಿತರು ಕರೆಯುತ್ತಾರಲ್ಲವೇ? ಆದ್ದರಿಂದ ಭಾರತರಾಷ್ಟ್ರದ ಈ ನವ ವ್ಯಾಕರಣ ಮಹರ್ಷಿಗಳಿಗೆ ನಮೋ ನಮಃ.

30. ಆರು ಅನ್ನರಸಗಳು

ಮನುಷ್ಯನು ರುಚಿರುಚಿಯಾದ ಊಟವನ್ನು ಮಾಡುತ್ತಾನಲ್ಲವೇ? ಈಗಿನ ಕಾಲದಲ್ಲಂತೂ ನೂರಾರು ರಸಗಳು, ರುಚಿಗಳು, ಹಾಗೂ ವೈವಿಧ್ಯಗಳು ಊಟದಲ್ಲಿ ಇರುತ್ತವೆ. ಈ ನೂರಾರು ರಸಗಳನ್ನು ಕೇವಲ **ಆರು** ರಸಗಳಲ್ಲಿ ಅಡಕಮಾಡಿ ಈ ಕೆಳಗಿನ ಶ್ಲೋಕದಲ್ಲಿ ಸಂಗ್ರಹಿಸಿ ಹೇಳಿರುತ್ತಾರೆ:

ಕಷಾಯೋ ಮಧುರಶ್ಚೈವ ಲವಣಶ್ಚ ಕಟುಸ್ತಥಾ।
ತಿಕ್ತಃ ಆಮ್ಲಶ್ಚ ಸುರಸಾಃ ಭೋಜ್ಯಾನ್ನೇ "ಷಡ್ ರಸಾಃ ಸ್ಮೃತಾಃ"॥

ಕಷಾಯ, ಮಧುರ, ಲವಣ, ಕಟು, ತಿಕ್ತ, ಆಮ್ಲ ಎಂದು ಆರು ರಸಗಳು.

೧. **ಕಷಾಯಃ** ಒಗರಾದ ರಸ. ನಾಲಿಗೆಗೆ ಇಷ್ಟವಾಗದ ರುಚಿ. ಆರೋಗ್ಯಕ್ಕೆ ಹಿತವಾಗಿದ್ದರೂ ನಾಲಿಗೆಗೆ ರುಚಿಯಾಗದ ಒಂದು ರಸವಿದು.

೨. **ಮಧುರಃ** ಸಿಹಿಯಾದ ರುಚಿ. ಸಿಹಿಯಲ್ಲಿಯೂ ಹತ್ತಾರು ಭೇದಗಳಿರುತ್ತವೆ. ಸಕ್ಕರೆ, ಜೇನು, ದ್ರಾಕ್ಷಿ, ಬೆಲ್ಲ, ಮಾವಿನಹಣ್ಣು—ಇವುಗಳೆಲ್ಲವೂ ಮಧುರವೇ.

೩. **ಲವಣಃ** ಉಪ್ಪು. ಭೋಜನದಲ್ಲಿ ಉಪ್ಪಿನ ರುಚಿಗೂ ಅದ್ಭುತವಾದ ಸ್ಥಾನವಿದೆಯಲ್ಲವೇ? ಉಪ್ಪನ್ನು ಹಾಕದ ಸಾರು, ಗೊಜ್ಜು, ಪಲ್ಯ, ಕೋಸಂಬ್ರಿಗಳು ರುಚಿಸುವುದಿಲ್ಲವಲ್ಲವೇ? 'ಉಪ್ಪಿಲ್ಲದ ಉದಕ ರುಚಿಯಲ್ಲ' ಎಂಬ ಗಾದೆಯೂ ಇದೆಯಲ್ಲವೇ?

೪. **ಕಟುಃ** ಖಾರ. ಖಾರದ ಪದಾರ್ಥಗಳೆಂದರೆ ಮೆಣಸಿನಕಾಯಿ, ಮೆಣಸಿನ ಕಾಳು, ಹಸಿಶುಂಠಿ, ಈರುಳ್ಳಿ, ಮೂಲಂಗಿ ಮುಂತಾದವುಗಳು.

೫. **ತಿಕ್ತಃ** ಎಂದರೆ ಕಹಿಯಾದ ರುಚಿ. ಬೇವಿನ ಎಲೆ, ಹಾಗಲಕಾಯಿ—ಇವುಗಳ ರಸವೂ ಆರೋಗ್ಯಕರವಾದ ಊಟಕ್ಕೆ ಬೇಕೇಬೇಕಲ್ಲವೇ?

೬. **ಆಮ್ಲಃ** ಎಂದರೆ ಹುಳಿಯಾದ ರುಚಿ. ನಿಂಬೆ ಹಣ್ಣು, ಹುಣಿಸೇಹಣ್ಣು, ಮಾವಿನಕಾಯಿ—ಇವುಗಳ ರುಚಿಯೂ ಊಟಕ್ಕೆ ಬೇಕಲ್ಲವೇ?

ಹೀಗೆ ಈ **ಆರೂ** ರುಚಿಗಳು ಸೇರಿದಾಗಲೇ ಆ ಊಟಕ್ಕೆ ಒಂದು ಸೊಗಸಾದ, ವಿಶಿಷ್ಟವಾದ ರುಚಿಯು ಬರುತ್ತದೆಯಲ್ಲವೇ?

31. ನವ ಗ್ರಹಗಳು

ಇಡೀ ವಿಶ್ವವನ್ನೇ ಆಳುವ ಶಕ್ತಿಯು ಗ್ರಹಗಳಿಗೆ ಇದೆ. ಇವುಗಳಿಗೆ ಹೆಸರೇ **ಗ್ರಹ** ಎಂದು. **ಗೃಹ್ಣಂತಿ ಇತಿ ಗ್ರಹಾಃ, ಗ್ರಾಹಯಂತಿ ಇತಿ ಗ್ರಹಾಃ.** ಎಲ್ಲರನ್ನೂ ಹಾಗೂ ಎಲ್ಲವನ್ನೂ ತಮ್ಮ ಕಡೆಗೆ ಸೆಳೆಯುವ ಶಕ್ತಿಯೇ ಗ್ರಹಗಳು. ಈ ಗ್ರಹಗಳು ಒಂಬತ್ತು; ಇವುಗಳ ಪಟ್ಟಿಯನ್ನು ಈ ಕೆಳಗಿನ ಶ್ಲೋಕದಲ್ಲಿ ಹೇಳಿರುತ್ತದೆ:

ಸವಿತಾ ಚಂದ್ರಮಾಶ್ಚೈವ ಮಂಗಳಶ್ಚ ಬುಧೋ ಗುರುಃ।
ಶುಕ್ರಃ ಶನಿಃ ರಾಹುಕೇತೂ "ನವೈತೇ ಕಾರಕಾ ಗ್ರಹಾಃ"॥

೧. **ಸವಿತಾಃ** ಎಂದರೆ ಸೂರ್ಯ. ಸೌರವ್ಯೂಹಕ್ಕೆ ಅಧಿಪತಿಯಾದ ಸಮರ್ಥನಾದ ಗ್ರಹ. ಗ್ರಹಮಂಡಲಕ್ಕೇ ಅಧಿಪತಿ ಸೂರ್ಯ. ಇವನು ಪ್ರತ್ಯಕ್ಷಗ್ರಹ.

೨. **ಚಂದ್ರಃ** ಸಾತ್ತ್ವಿಕನಾದ ಹಾಗೂ ಮನಸ್ಸಿಗೆ ಆನಂದವನ್ನು ಉಂಟುಮಾಡುವ ಶುದ್ಧನಾದ ಗ್ರಹ. ಚಂದ್ರನೂ ಪ್ರತ್ಯಕ್ಷಗ್ರಹ.

೩. **ಮಂಗಳಃ** ತೀಕ್ಷ್ಣಗ್ರಹ. ಸುಬ್ರಹ್ಮಣ್ಯನ ಗ್ರಹ. ಆರೋಗ್ಯವನ್ನೂ ಜ್ಞಾನವನ್ನೂ ನೆಮ್ಮದಿಯನ್ನೂ ಕರುಣಿಸುವ ಧೀರಗ್ರಹ.

೪. **ಬುಧಃ** ಇವನು ವಿಷ್ಣುಗ್ರಹ. ಮಾನವರಿಗೆ ವಿದ್ಯೆಯನ್ನೂ ಆತ್ಮಜ್ಞಾನವನ್ನೂ ಹಾಗೂ ಮೇಧಾಸಾಮರ್ಥ್ಯವನ್ನೂ ಕರುಣಿಸುವ ಗ್ರಹ.

೫. **ಗುರುಃ** ಎಂದರೆ ಬೃಹಸ್ಪತಿ. ಹೆಸರೇ ಹೇಳುವಂತೆ ಇವನು ದೇವತೆಗಳಿಗೆ ಗುರು. ಅತ್ಯಂತ ಶ್ರೇಷ್ಠನೂ, ಶುಭಫಲಪ್ರದನೂ, ಸುಖಕಾರಕನೂ ಮತ್ತು ಅನುಗ್ರಹಕಾರಕನೂ ಆದ ಗ್ರಹ.

೬. **ಶುಕ್ರಃ** ಶುಕ್ರನು ಅಸುರರ ಗುರು. ಶುಕ್ರಗ್ರಹವೂ ಶಾಂತಿನೆಮ್ಮದಿಗಳನ್ನು ಹಾಗೂ ಆಯುರಾರೋಗ್ಯಾದಿ ಸೌಭಾಗ್ಯಗಳನ್ನು ಕೊಡುವ ಶುಭಗ್ರಹ.

೭. **ಶನಿಃ** ಶನಿಗ್ರಹವು ಮಂದಗಾಮಿಯಾಗಿ ತನ್ನ ಭಕ್ತರ ಸಕಲ ಸಂಕಟಗಳನ್ನು ಪರಿಹಾರಮಾಡಿ ವೈರಾಗ್ಯಭಾಗ್ಯವನ್ನು ಉಂಟುಮಾಡುವ ಗ್ರಹ.

೮. **ರಾಹುಃ** ರಾಹುಗ್ರಹವು ತಮೋಗುಣದ ಗ್ರಹ.

೯. **ಕೇತುಃ** ಕೇತುಗ್ರಹವೂ ತಮೋರೂಪವಾದ ಗ್ರಹ.

ನಮಃ ಸೂರ್ಯಾಯ ಚಂದ್ರಾಯ ಮಂಗಳಾಯ ಬುಧಾಯ ಚ।
ಗುರುಶುಕ್ರಶನಿಭ್ಯಶ್ಚ ರಾಹವೇ ಕೇತವೇ ನಮಃ॥

32. ಚತುರ್ದಶ ಕರಣಗಳು

ಭಗವಂತನು ಮಾನವರಿಗೆ ಅದ್ಭುತವಾದ ಶಕ್ತಿಯನ್ನು ಕೊಟ್ಟಿರುತ್ತಾನೆ. ಅಂಥ ಶಕ್ತಿಯು ಈ ಹುಲ್ಲು ಮಾನವನಿಗೆ ಯಾತರಿಂದ ಬಂದಿದೆ? ಎಂದರೆ, ಹದಿನಾಲ್ಕು ಕರಣಗಳಿಂದ. ಆ ಕರಣಗಳನ್ನು ಈ ಕೆಳಗಿನ ಶ್ಲೋಕದಲ್ಲಿ ಹೇಳಿದೆ:

ಜ್ಞಾನೇಂದ್ರಿಯಾಣಿ ಪಂಚೈವ ಪಂಚ ಕರ್ಮೇಂದ್ರಿಯಾಣಿ ಚ।
ತಥಾಽಂತಃಕರಣಂ ಸೂಕ್ಷ್ಮಂ "ಕರಣಾನಿ ಚತುರ್ದಶ"॥

ಐದು ಜ್ಞಾನೇಂದ್ರಿಯ, ಐದು ಕರ್ಮೇಂದ್ರಿಯ, ನಾಲ್ಕು ಅಂತಃಕರಣ, (ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ); ಹೀಗೆ ಒಟ್ಟು **ಹದಿನಾಲ್ಕು** ಕರಣಗಳು.

ಐದು ಜ್ಞಾನೇಂದ್ರಿಯಗಳು

೧. **ಕಣ್ಣು:** ರೂಪಜ್ಞಾನವನ್ನುಂಟುಮಾಡುವ ಕರಣ

೨. **ಕಿವಿ:** ಶಬ್ದಜ್ಞಾನವನ್ನುಂಟುಮಾಡುವ ಕರಣ

೩. **ಸ್ಪರ್ಶ:** ಸ್ಪರ್ಶಜ್ಞಾನವನ್ನುಂಟುಮಾಡುವ ಕರಣ

೪. **ರಸನೇಂದ್ರಿಯ:** ರುಚಿಯ ಅರಿವನ್ನುಂಟುಮಾಡುವ ಕರಣ

೫. **ಘ್ರಾಣ:** ವಾಸನೆಯ ಅರಿವನ್ನುಂಟುಮಾಡುವ ಕರಣ

ಐದು ಕರ್ಮೇಂದ್ರಿಯಗಳು

೬. **ವಾಕ್:** ಮಾತನ್ನಾಡುವ ಕರಣ

೭. **ಪಾಣಿ:** ಕೆಲಸಗಳನ್ನು ಮಾಡುವ ಕರಣ

೮. **ಪಾದ:** ನಡಿಗೆಯನ್ನು ಮಾಡುವ ಕರಣ

೯. **ಪಾಯು:** ಮಲವನ್ನು ದೇಹದಿಂದ ಹೊರಕ್ಕೆ ತಳ್ಳುವ ಕರಣ

೧೦. **ಉಪಸ್ಥ:** ಮೂತ್ರವನ್ನು ವಿಸರ್ಜಿಸುವ ಕರಣ

ನಾಲ್ಕು ಅಂತಃಕರಣಗಳು

೧೧. **ಮನಸ್ಸು:** ಸಂಕಲ್ಪವಿಕಲ್ಪಗಳನ್ನು ಮಾಡುವ ಅಂತಃಕರಣ

೧೨. **ಬುದ್ಧಿ:** ನಿಶ್ಚಯಜ್ಞಾನವನ್ನು ಉಂಟುಮಾಡುವ ಅಂತಃಕರಣ

೧೩. **ಚಿತ್ತ:** ವಸ್ತುಗಳನ್ನು ಅರಿಯುವ ಅಂತಃಕರಣ

೧೪. **ಅಹಂಕಾರ:** ಎಲ್ಲದರಲ್ಲೂ 'ನಾನು' ಎಂದು ಮೆರೆಯುವ ಅಂತಃಕರಣ.

33. ನವ ನವಗ್ರಹಧಾನ್ಯಗಳು

ನವಗ್ರಹಹೋಮ, ಪೂಜಾ, ದಾನಗಳನ್ನು ನಾವು ಮಾಡುತ್ತೇವೆ. ನವಗ್ರಹ ಗಳೆಂದರೆ ಒಂಬತ್ತು ಗ್ರಹಗಳು. ಸೂರ್ಯ, ಚಂದ್ರ, ಮಂಗಳ, ಬುಧ, ಗುರು, ಶುಕ್ರ, ಶನಿ, ರಾಹು ಮತ್ತು ಕೇತುಗಳೆಂಬ ನವಗ್ರಹಗಳ ಶಾಂತಿಯಿಂದ ಜಗತ್ತಿಗೆ ಕಲ್ಯಾಣವಾಗುವುದರಲ್ಲಿ ಸಂಶಯವಿಲ್ಲ. ನವಗ್ರಹಶಾಂತಿಯನ್ನು ಮಾಡುವಾಗ ನವಮಂಡಲಗಳು, ನವಧಾನ್ಯಗಳು, ನವಗ್ರಹಪತ್ನಿಯರು, ನವಗ್ರಹಶಸ್ತ್ರಗಳು, ನವಗ್ರಹಪುಷ್ಪಗಳು, ನವಗ್ರಹಮಂತ್ರಗಳು, ನವಗ್ರಹದೇವತಾಪ್ರತ್ಯಧಿದೇವತೆ ಗಳು, ನವಗ್ರಹವಾಹನಗಳು, ನವಗ್ರಹಸಮಿತ್ತುಗಳು, ನವಗ್ರಹ ಆಹುತಿಗಳು— ಇವೆಲ್ಲವನ್ನೂ ಸರಿಯಾಗಿ ತಿಳಿದುಕೊಂಡೇ ಇರಬೇಕು. ನಾನಿಲ್ಲಿ ಸದ್ಯಕ್ಕೆ ನವಗ್ರಹ ಗಳ **ನವ ಧಾನ್ಯಗಳ** ಶ್ಲೋಕವನ್ನು ಹೇಳುತ್ತೇನೆ:

ಗೋಧೂಮಾಸ್ತಂಡುಲಾಃ ಶ್ವೇತಾಃ ಆಢಕಾಶ್ಚಾಥ ಮುದ್ಗಕಾಃ।
ಚಣಕಾಃ ಶುಕ್ಲನಿಷ್ಪಾವಾಃ ತಿಲಮಾಷಕುಳಿತ್ಥಕಾಃ॥

೧. ಸೂರ್ಯಗ್ರಹಕ್ಕೆ ಗೋಧಿಧಾನ್ಯ—ಗೋಧೂಮಾಃ

೨. ಚಂದ್ರಗ್ರಹಕ್ಕೆ ಬಿಳುಪಾದ ಅಕ್ಕಿ—ತಂಡುಲಾಃ ಶ್ವೇತಾಃ

೩. ಮಂಗಳಗ್ರಹಕ್ಕೆ ತೊಗರೀಕಾಳು—ಆಢಕಾಃ

೪. ಬುಧಗ್ರಹಕ್ಕೆ ಹೆಸರುಕಾಳು—ಮುದ್ಗಕಾಃ

೫. ಗುರುಗ್ರಹಕ್ಕೆ ಕಡಲೇಕಾಳು—ಚಣಕಾಃ

೬. ಶುಕ್ರಗ್ರಹಕ್ಕೆ ಬಿಳಿಬಣ್ಣದ ಅವರೇಕಾಳು—ಶುಕ್ಲನಿಷ್ಪಾವಾಃ

೭. ಶನಿಗ್ರಹಕ್ಕೆ ಕಪ್ಪು ಎಳ್ಳು—ತಿಲಾಃ

೮. ರಾಹುಗ್ರಹಕ್ಕೆ ಉದ್ದಿನಕಾಳು—ಮಾಷಾಃ

೯. ಕೇತುಗ್ರಹಕ್ಕೆ ಹುರುಳಿ—ಕುಳಿತ್ಥಕಾಃ

ಒಂದೇ ಶ್ಲೋಕದಲ್ಲಿ ಈ ಒಂಭತ್ತೂ ಧಾನ್ಯಗಳನ್ನು ಸಂಗ್ರಹಿಸಿರುವುದೇ ವಿಶೇಷ. ಹೀಗೆ ವಿಷಯಗಳನ್ನು ಹಿರಿಯರಿಂದ ಸರಿಯಾಗಿ ತಿಳಿದುಕೊಂಡು ವಿಧಿಯನ್ನನುಸರಿಸಿ ನವಗ್ರಹಗಳ ಹೋಮ, ಜಪ, ಪೂಜಾ, ದಾನಾದಿಗಳನ್ನು ಮಾಡುವುದರಿಂದ ಇಷ್ಟಾರ್ಥಗಳು ಲಭಿಸುತ್ತವೆ.

34. ನಾಲ್ಕು ವಾಕ್ಕುಗಳು

ಮಾನವರಿಗೆ ದೈವದತ್ತವಾದ ಅದ್ಭುತ ಸಂಪತ್ತು ಎಂದರೆ **ವಾಕ್**. ವಾಕ್ ಎಂದರೆ ಮಾತು. ಈ ವಾಕ್ಕು ನಾಲ್ಕು ರೀತಿಯದಾಗಿರುತ್ತದೆ:

ಪರಾ ಚೈವ ಹಿ ಪಶ್ಯಂತೀ ಮಧ್ಯಮಾ ವೈಖರೀ ತಥಾ।
ಏವಂ "ಚತುರ್ವಿಧಾ ವಾಣೀ" ಬ್ರಹ್ಮಣಾ ನಿರ್ಮಿತಾ ಶುಭಾ॥

ಶುಭರೂಪವಾದ ವಾಣಿಯು ಬ್ರಹ್ಮನಿಂದ ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ಎಂದು **ನಾಲ್ಕು** ರೀತಿಯಲ್ಲಿ ಸೃಷ್ಟಿಮಾಡಲ್ಪಟ್ಟಿರುತ್ತದೆ.

೧. **ಪರಾ ವಾಕ್:** ಹೆಸರೇ ಹೇಳುವಂತೆ, ಇದು **ಪರಾ** ಎಂದರೆ ಉತ್ಕೃಷ್ಟವಾದ ವಾಕ್. ಪರಾ, ಶುದ್ಧಾ, ಪವಿತ್ರಾ, ಸೂಕ್ಷ್ಮಾ ಎಂದೆಲ್ಲಾ ಪರ್ಯಾಯ ಪದಗಳು. ಇದು ವೈದಿಕವಾಣೀ, ಇದು ಗುಹಾಹಿತವಾಗಿದೆ. ಇದು ಅಮರವಾಣೀ, ದೇವವಾಣೀ. ಇದಕ್ಕೇ ಅಪ್ರಾಕೃತವಾಣೀ ದಿವ್ಯವಾಣೀ ಎಂದೂ ಹೆಸರು. ಇದು ಬ್ರಹ್ಮಾನುಭವದ ಸೂಕ್ಷ್ಮವಾದ ವಾಣಿ.

೨. **ಪಶ್ಯಂತೀ ವಾಕ್:** ಇದು ಆರ್ಷವಾಣೀ. **ಪಶ್ಯತಿ ಇತಿ ಪಶ್ಯಂತೀ**, ಎಂದರೆ ಒಳಗಿನ ವಾಣೀ. ತಪಸ್ವಿಗಳಿಗೆ ಹಾಗೂ ಅಂತರ್ಮುಖಿಗಳಾದ ಮಹರ್ಷಿಗಳಿಗೆ ಮಾತ್ರ ಅರ್ಥವಾಗುವ ಅಪ್ರಾಕೃತವಾಣಿಯೇ **ಪಶ್ಯಂತೀ ವಾಕ್**. ಋಷಿಗಳ ತಪಸ್ಯಾಭೂಮಿಕೆಯಲ್ಲಿ ಶುದ್ಧಾಂತಃಕರಣದಲ್ಲಿ ಅಭಿವ್ಯಕ್ತವಾಗುವ ಸೂಕ್ಷ್ಮ ಹಾಗೂ ಪವಿತ್ರವಾದ ವಾಣಿಯಿದು.

೩. **ಮಧ್ಯಮಾ ವಾಕ್:** ಇದೂ ಕೂಡ ಋಷಿಗಳಿಗೆ ಗೋಚರವಾಗುವ ಹೃದಯದ ವಾಣಿಯೇ. ಇದೂ ಸಾಮಾನ್ಯ ಮಾನವರಿಗೆ ಅರ್ಥವಾಗದ, ಪವಿತ್ರವಾದ ವಾಣಿಯೇ ಆಗಿದೆ. ಹೀಗೆ ಪರಾ, ಪಶ್ಯಂತೀ, ಮಧ್ಯಮಾ ಎಂಬ ಈ ಮೂರೂ ವಾಕ್ಕುಗಳು ಗುಹೆಯನ್ನು ಪ್ರವೇಶಮಾಡಿರುತ್ತವೆ. ಅಂದರೆ ಲೌಕಿಕರಿಗೆ ದಕ್ಕದ ವಾಕ್ಕುಗಳಿವು.

೪. **ವೈಖರೀ ವಾಕ್:** ಇದು ಎಲ್ಲಾ ಮಾನವರೂ ಆಡುವ ಮಾತು. ಮನಸ್ಸಿನಿಂದ ಹೊರಟು, ನಾಭಿಯ ಮೂಲಕ, ಬಾಯಿನಿಂದ ಹೊರಹೊಮ್ಮುವ, ಇತರರಿಗೆ ಅರ್ಥವಾಗುವಂತೆ, ಕೇಳಿಸುವಂತೆ ಉಚ್ಚರಿಸಲ್ಪಡುವ ಸ್ಥೂಲವಾದ ಮಾತಿದು. ಇದಕ್ಕೇ ಸ್ಥೂಲವಾಕ್ ಎಂದೂ ಹೆಸರು. **ತುರೀಯಂ ವಾಚಂ ಮನುಷ್ಯಾ ವದಂತಿ**. ಇದಕ್ಕೇ ತುರೀಯಾ, ಚತುರ್ಥೀ ವಾಕ್ ಎಂದೂ ಹೆಸರಿದೆ. ಇದು ಮಾನವಕೃತವಾದ, ಮಾನವಬುದ್ಧಿಗೃಹೀತವಾದ ಸ್ಥೂಲವಾದ ಲೌಕಿಕವಾಣೀ.

35. ಪಂಚ ಕೋಶಗಳು

ಆತ್ಮನನ್ನು ವೇದಾಂತಗಳಲ್ಲಿ ಪಂಚಕೋಶಾತೀತನೆಂದೂ, ಪಂಚಕೋಶ ಸಾಕ್ಷಿಯೆಂದೂ, ಪಂಚಕೋಶವಿಲಕ್ಷಣನೆಂದೂ ವರ್ಣಿಸುತ್ತಾರೆ. ಬ್ರಹ್ಮಜ್ಞಾನಿಯು ಪಂಚಕೋಶಗಳನ್ನು ಮೀರಿಹೋಗಿ ಆತ್ಮನಿಷ್ಠನಾಗಿರುತ್ತಾನೆ ಎಂದು ತೈತ್ತಿರೀಯೋಪನಿಷತ್ತು ಸಾರುತ್ತಿದೆ. ಹಾಗಾದರೆ ಆ **ಪಂಚಕೋಶಗಳು** ಯಾವುವು ಎಂಬುದನ್ನು ನೋಡೋಣ:

ಅನ್ನಮಯಃ ಪ್ರಾಣಮಯೋ ಮನೋಮಯಶ್ಚ ಧೀಮಯಃ।
ತಥಾಽಽನಂದಮಯಶ್ಚೇತಿ "ಪಂಚ ಕೋಶಾಃ ಪ್ರಕೀರ್ತಿತಾಃ"॥

ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದ ಮಯಗಳೆಂದು ಐದು ಕೋಶಗಳು ನಮ್ಮೊಳಗೇ ಇರುತ್ತವೆ.

೧. **ಅನ್ನಮಯಕೋಶ** ಎಂದರೆ ಅನ್ನದಿಂದ ಹುಟ್ಟಿರುವ ಈ ಶರೀರ. ಅನ್ನ ದಿಂದ ಹುಟ್ಟಿ, ಅನ್ನದಿಂದಲೇ ಬದುಕಿದ್ದು, ಕೊನೆಯಲ್ಲಿ ಅನ್ನದಲ್ಲಿಯೇ ಎಂದರೆ ಮಣ್ಣಿನಲ್ಲಿಯೇ ಸೇರಿಹೋಗುವ ಶರೀರವು **ಅನ್ನಮಯಕೋಶ**.

೨. **ಪ್ರಾಣಮಯಕೋಶ** ಎಂದರೆ ಇಂದ್ರಿಯ ಪ್ರಾಣಗಳಿಂದಾಗಿರುವ ಕೋಶ. ಪ್ರಾಣನಿಂದಲೇ ಶರೀರವು ತನ್ನ ವ್ಯಾಪಾರಗಳನ್ನು ಮಾಡುತ್ತಾ ಇದೆಯಲ್ಲವೇ? ಈ ಪ್ರಾಣಮಯಕೋಶವು ಅನ್ನಮಯಕೋಶಕ್ಕಿಂತಲೂ ಸೂಕ್ಷ್ಮವಾಗಿದ್ದು ವ್ಯಾಪಕವಾಗಿರುತ್ತದೆ.

೩. **ಮನೋಮಯಕೋಶ** ಎಂದರೆ ಮನ ಉಪಾಧಿಕನಾದ ಆತ್ಮ. ಮನಸ್ಸೆಂದರೆ ಸಂಕಲ್ಪವಿಕಲ್ಪರೂಪವಾದ ಸೂಕ್ಷ್ಮವಾದ ಅಂತಃಕರಣವು. ಮನಸ್ಸಿನಿಂದಲೇ ಶರೀರಪ್ರಾಣಗಳು ನಿಯಮಿಸಲ್ಪಡುತ್ತವೆಯಲ್ಲವೇ?

೪. **ವಿಜ್ಞಾನಮಯಕೋಶ** ಎಂದರೆ ಬುದ್ಧಿಪ್ರಧಾನವಾದ ಕೋಶ. ಬುದ್ಧಿ ಎಂದರೆ ನಿಶ್ಚಯಾತ್ಮಕವಾದ ಅಂತಃಕರಣ; ಇದನ್ನು ಉಪಾಧಿಯನ್ನಾಗಿ ಉಳ್ಳ ಆತ್ಮನೇ ಕರ್ತೃ ಎಂದು ಪ್ರಸಿದ್ಧನಾಗಿರುತ್ತಾನೆ. ಇವನು ಅತ್ಯಂತ ಸೂಕ್ಷ್ಮನೂ ವ್ಯಾಪಕನೂ ಆಗಿರುತ್ತಾನೆ.

೫. **ಆನಂದಮಯಕೋಶ** ಎಂದರೆ ಭೋಕ್ತೃವಾದ ಆತ್ಮನು. ಇವನು ಹಿಂದಿನ ನಾಲ್ಕೂ ಕೋಶಗಳಿಗಿಂತ ಅತ್ಯಂತ ಸೂಕ್ಷ್ಮನೂ ವ್ಯಾಪಕನೂ ಆಗಿರುತ್ತಾನೆ.

ಆದರೆ ನೆನಪಿರಲಿ, ಈ ಐದೂ ಆತ್ಮರುಗಳು ಅನಾತ್ಮರೇ ಆಗಿರುತ್ತಾರೆ. ಪಂಚಕೋಶಗಳಿಗೂ ಆತ್ಮನಾದವನೇ ಪ್ರತ್ಯಗಾತ್ಮನೆಂದು ತಿಳಿಯಬೇಕು.

36. ಆರು ವಿಪ್ರಕರ್ಮಗಳು

ನಮ್ಮ ಹಿಂದೂ ಸನಾತನಧರ್ಮದಲ್ಲಿ ವರ್ಣಾಶ್ರಮವಿಭಾಗವು ಇದೆಯಲ್ಲವೇ? ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವರ್ಣವಿಭಾಗವೂ; ತ್ರೈವರ್ಣಿಕರಲ್ಲಿ ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸಿ—ಎಂಬ ವಿಭಾಗವೂ ಶಾಸ್ತ್ರಗಳಲ್ಲಿ ಪ್ರಸಿದ್ಧವಾಗಿರುತ್ತವೆ.

ಬ್ರಾಹ್ಮಣನಿಗೇ ವಿಪ್ರ, ದ್ವಿಜ, ಶರ್ಮಾ ಮುಂತಾದ ಹೆಸರುಗಳು. ವಿಪ್ರರು ಮಾಡಬೇಕಾಗಿರುವ **ಆರು** ಕರ್ಮಗಳನ್ನು ಈ ಶ್ಲೋಕದಲ್ಲಿ ತಿಳಿಸಿದೆ:

ಇಜ್ಯಾಧ್ಯಯನದಾನಾನಿ ಯಾಜನಾಧ್ಯಾಪನೇ ತಥಾ।
ಪ್ರತಿಗ್ರಹಶ್ಚ ತೈರ್ಯುಕ್ತಃ "ಷಟ್ಕರ್ಮಾ ವಿಪ್ರ" ಉಚ್ಯತೇ॥

ಇಜ್ಯ, ಅಧ್ಯಯನ, ದಾನ, ಯಾಜನ, ಅಧ್ಯಾಪನ ಮತ್ತು ಪ್ರತಿಗ್ರಹಗಳು. ಈ ***ಆರು*** *ಕರ್ಮಗಳಿಂದ ಕೂಡಿದವನೇ* ***ವಿಪ್ರ*** *ಎನಿಸುತ್ತಾನೆ.*

ಇವುಗಳ ಸಂಕ್ಷಿಪ್ತ ವಿವರವನ್ನು ನೋಡೋಣ:

೧. **ಇಜ್ಯ:** ಅಗ್ನಿಹೋತ್ರಾನುಷ್ಠಾನವನ್ನು ವಿಪ್ರನು ಮಾಡಬೇಕು.

೨. **ಅಧ್ಯಯನ:** ಪ್ರತಿದಿನವೂ ವಿಪ್ರನು ವೇದಾಧ್ಯಯನವನ್ನು ಮಾಡಬೇಕು.

೩. **ದಾನ:** ತಾನು ಸಂಪಾದಿಸಿದ ಹಣವನ್ನು ಸತ್ಪಾತ್ರಕ್ಕೆ ದಾನಮಾಡಬೇಕು.

೪. **ಯಾಜನ:** ಯಜ್ಞಯಾಗಾದಿಗಳನ್ನು ಬೇರೆಯವರಿಗೆ ಮಾಡಿಸಬೇಕು.

೫. **ಅಧ್ಯಾಪನ:** ಬೇರೆಯವರಿಗೂ ವೇದಮಂತ್ರಗಳನ್ನು ಹೇಳಿಕೊಡಬೇಕು.

೬. **ಪ್ರತಿಗ್ರಹ:** ಬೇರೆಯವರಿಂದ ದಾನವನ್ನು ತೆಗೆದುಕೊಳ್ಳಲೂ ಬೇಕು.

ವಿಪ್ರನು ಎಂದರೆ ಬ್ರಾಹ್ಮಣನು ತಾನು ಸ್ವತಃ ವೇದಗಳ ಅಧ್ಯಯನವನ್ನು ಮಾಡುತ್ತಾ, ಅಗ್ನಿಹೋತ್ರವನ್ನೂ ಅನುಷ್ಠಾನಮಾಡುತ್ತಾ, ಯಥಾಶಕ್ತಿ ದಾನವನ್ನೂ ಮಾಡುತ್ತಿರಬೇಕು. ಇನ್ನು, ಗೃಹಸ್ಥನಾದ್ದರಿಂದ ತನ್ನ ಜೀವನನಿರ್ವಹಣೆಗಾಗಿ ಗೃಹಸ್ಥನಾದ ವಿಪ್ರನು ಅಧ್ಯಾಪನ, ಯಾಜನ, ಪ್ರತಿಗ್ರಹಗಳನ್ನು ಅವಶ್ಯವಾಗಿ ಮಾಡಲೇಬೇಕು. ಆದ್ದರಿಂದಲೇ **'ಷಟ್ಕರ್ಮಾ ವಿಪ್ರ ಉಚ್ಯತೇ'** ಎಂದಿರುತ್ತಾರೆ. ಈ **ಆರೂ** ಕರ್ಮಗಳು ಶಾಸ್ತ್ರವಿಹಿತವೇ ಆಗಿರುತ್ತವೆ. ಗೃಹಸ್ಥನಾದ ವಿಪ್ರನಿಗೆ ಈ ಆರೂ ಕರ್ಮಗಳನ್ನು **ನಿತ್ಯಕರ್ಮಗಳು** ಎಂದೇ ಶಾಸ್ತ್ರಗಳಲ್ಲಿ ಹೇಳಿರುತ್ತಾರೆ.

37. ಪಂಚ ಪ್ರಾಣಗಳು

ನಮ್ಮ ದೇಹದಲ್ಲಿ ಪ್ರಾಣವು ಇರುವುದರಿಂದಲೇ ಸಕಲವ್ಯಾಪಾರಗಳೂ ಸಹಜವಾಗಿ ಹಾಗೂ ಕ್ರಮವಾಗಿ ನಡೆಯುತ್ತಿವೆ. **ಪ್ರಾಣಿತಿ ಇತಿ ಪ್ರಾಣಃ, ಪ್ರಕರ್ಷೇಣ ಅನಿತಿ ಇತಿ ಪ್ರಾಣಃ;** ಎಲ್ಲಾ ಇಂದ್ರಿಯಗಳನ್ನೂ ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿ ಚೆನ್ನಾಗಿ ಪ್ರೇರಿಸುವವನೇ ಪ್ರಾಣನು. ಇವನೇ ಮುಖ್ಯ ಪ್ರಾಣನು. ಭಿನ್ನಭಿನ್ನ ವ್ಯಾಪಾರಗಳಿಂದ ಈ ಪ್ರಾಣನಿಗೇ ಐದು ಭಿನ್ನಭಿನ್ನ ಹೆಸರು ಗಳು ಬಂದಿರುತ್ತವೆ. ಅವುಗಳು ಯಾವುವೆಂದರೆ: ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನಗಳು. ಈ ಐದನ್ನೂ ಸಂಗ್ರಹಿಸಿ ಈ ಕೆಳಗಿನ ಶ್ಲೋಕದಲ್ಲಿ ಹೀಗೆ ಹೇಳಿರುತ್ತದೆ:

ಪ್ರಾಣಾಪಾನೌ ತಥಾ ವ್ಯಾನಃ ಉದಾನಶ್ಚ ಸಮಾನಗಃ।
ಶರೀರವ್ಯಾಪಿನೋ ನೂನಂ "ಪಂಚ ಪ್ರಾಣಾಃ ಪ್ರಕೀರ್ತಿತಾಃ"॥

ಹೃದಿ ಪ್ರಾಣೋ ಗುದೇಽಪಾನಃ ಸಮಾನೋ ನಾಭಿಸಂಸ್ಥಿತಃ।
ಉದಾನಃ ಕಂಠದೇಶೇ ಸ್ಯಾತ್ ವ್ಯಾನಃ ಸರ್ವಶರೀರಗಃ॥

೧. **ಪ್ರಾಣನು** ಹೃದಯದಲ್ಲಿ ಇದ್ದುಕೊಂಡು ಅನ್ನವನ್ನು ದೇಹದೊಳಗೆ ಸೇರಿಸುತ್ತಾ ಅದರಿಂದ ಶರೀರವನ್ನು ಭದ್ರವಾಗಿ ಕಾಪಾಡುತ್ತಾ ಇರುತ್ತಾನೆ.

೨. **ಅಪಾನನು** ಗುದಸ್ಥಾನದಲ್ಲಿ ಇದ್ದುಕೊಂಡು ದೇಹದ ಕಲ್ಮಷವನ್ನು ಮೂತ್ರ ಹಾಗೂ ಮಲದ ಮೂಲಕವಾಗಿ ದೇಹದಿಂದ ಹೊರಕ್ಕೆ ತಳ್ಳುತ್ತಾ ಇದ್ದಾನೆ.

೩. **ವ್ಯಾನನು** ಶರೀರದ ಭಾಗಗಳನ್ನೆಲ್ಲಾ ಸಂಪೂರ್ಣವಾಗಿ ವ್ಯಾಪಿಸಿಕೊಂಡು, ಉಂಡ ಅನ್ನವನ್ನು ಚೆನ್ನಾಗಿ ಪಚನಮಾಡುತ್ತಾ ಶರೀರಕ್ಕೆಲ್ಲ ಶಕ್ತಿಯನ್ನು ಕೊಡುತ್ತಾ ಇದ್ದಾನೆ.

೪. **ಉದಾನನು** ಕಂಠಸ್ಥಾನದಲ್ಲಿ ಕೂತುಕೊಂಡು ಭಾಷಣಾದಿಗಳನ್ನು ಮಾಡಿಸುತ್ತಾ ವಿವೇಕಪ್ರಜ್ಞೆಯನ್ನು ಬೆಳಸುತ್ತಾ ಇರುತ್ತಾನೆ.

೫. **ಸಮಾನನು** ನಾಭೀದೇಶದಲ್ಲಿ ಇದ್ದುಕೊಂಡು ನಿಮೇಷಾದಿವ್ಯಾಪಾರವನ್ನು ಮಾಡುತ್ತಾ ಶರೀರವು ನಿಂತಿರುವಂತೆ ಮಾಡುತ್ತಾ ಇದ್ದಾನೆ.

ಅಂತೂ ಪಂಚಪ್ರಾಣಗಳಿಂದಲೇ ಈ ದೇಹವು ಬದುಕಿರುತ್ತದೆ. ಈ ಐದೂ ಪ್ರಾಣಗಳಿಗೆ ಸಾರಭೂತನಾದವನೇ ಮುಖ್ಯಪ್ರಾಣನು ಎಂದು ತಿಳಿಯಬೇಕು. ಈ ಮುಖ್ಯಪ್ರಾಣನಿಗೂ ಪರಬ್ರಹ್ಮವೇ ಆತ್ಮನಾಗಿರುತ್ತದೆ.

38. ಮನ್ಮಥನ ಪಂಚ ಬಾಣಗಳು

ಮನ್ಮಥ ಎಂದರೆ ಕಾಮ. ಕಾಮನಿಗೆ ಹೆಸರು ಅನಂಗ, ಪಂಚಶರ, ಕುಸುಮೇಷು, ಪಂಚಬಾಣ, ಪುಷ್ಪಧನ್ವಾ ಇತ್ಯಾದಿಗಳು. ಮನ್ಮಥನಿಗೆ ಶರೀರವಾಗಲೀ ಅಂಗಾಂಗಗಳಾಗಲೀ ಇಲ್ಲ. ಆದರೆ ಮನ್ಮಥನು ಎಂಥವನನ್ನೂ ಗೆಲ್ಲಬಲ್ಲ! ಕಣ್ಣುಗಳಿಗೆ ಕಾಣಿಸದಿದ್ದರೂ ಮನ್ಮಥನು ಸಮರ್ಥನೇ ಆಗಿರುತ್ತಾನೆ. ಮಹಾಮಹಾ ಪ್ರಚಂಡ ತಪಸ್ವಿಗಳಿಗೂ ಸರ್ವಸಂಗಪರಿತ್ಯಾಗಿಗಳಾದ ಯತಿಗಳಿಗೂ ಮಣ್ಣುಮುಕ್ಕಿಸಬಲ್ಲ ಧೀರನೆಂದರೆ ಮನ್ಮಥನೇ. ಇವನಿಗೆ ಪಂಚಶರ, ಪಂಚಬಾಣ ಎಂಬ ಹೆಸರುಗಳು ನಿಜಕ್ಕೂ ಅನ್ವರ್ಥಗಳಾಗಿರುತ್ತವೆ.

ಪಂಚ ಶರಾಃ ಯಸ್ಯ ಸಃ ಪಂಚಶರಃ; ಪಂಚ ಬಾಣಾಃ ಯಸ್ಯ ಸಃ ಪಂಚಬಾಣಃ. ಐದು ಬಾಣಗಳನ್ನುಳ್ಳ ಮನ್ಮಥನಿಗೆ **ಪಂಚಬಾಣ** ಎಂದೇ ಹೆಸರು. ಸರಿ, ಮನ್ಮಥನ ಆ **ಐದು** ಬಾಣಗಳಾವುವು ಎಂದರೆ, ಇಲ್ಲಿದೆ, ನೋಡಿರಿ:

ಉನ್ಮಾದನಸ್ತಾಪನಶ್ಚ ಶೋಷಣಃ ಸ್ತಂಭನಸ್ತಥಾ।
ಸಂಮೋಹನಶ್ಚ ಕಾಮಸ್ಯ "ಪಂಚ ಬಾಣಾಃ ಪ್ರಕೀರ್ತಿತಾಃ"॥

೧. **ಉನ್ಮಾದನ** ಎಂದರೆ ಎಚ್ಚರವನ್ನು ಎಂದರೆ ವಿವೇಕಪ್ರಜ್ಞೆಯನ್ನು ತಪ್ಪಿಸುವಿಕೆ. ಕಾಮಕ್ಕೆ ವಶನಾದವನು ಉನ್ಮತ್ತನೇ ಆಗಿಬಿಡುತ್ತಾನಲ್ಲವೇ? ಇದು ಮನ್ಮಥನ ಪ್ರಥಮಬಾಣ.

೨. **ತಾಪನ** ಎಂದರೆ ಸುಡುವಿಕೆ. ಕಾಮಪೀಡಿತನಾದವನ ಮೈಮನಗಳೆಲ್ಲವೂ ಬೆಂಕಿಯಂತೆ ಬಿಸಿಬಿಸಿಯಾಗುತ್ತವೆಯಲ್ಲವೇ? ಇದು ಎರಡನೆಯ ಬಾಣ.

೩. **ಶೋಷಣ** ಎಂದರೆ ಒಣಗಿಸಿಬಿಡುವುದು. ಮನ್ಮಥನ ವಿಕಾರಕ್ಕೆ ಒಳಗಾದವನನ್ನು ಕಾಮವು ಒಣಗಿಸಿಬಿಡುತ್ತದೆಯಲ್ಲವೇ?

೪. **ಸ್ತಂಭನ** ಎಂದರೆ ಅಲ್ಲಿಯೇ ತನ್ಮಯನಾಗಿಬಿಡುವಂತೆ ಮಾಡುತ್ತದೆ. ಕಾಮಾಂಧನಾದವನಿಗೆ ಕಾಮರತಿಯಲ್ಲಿಯೇ ಮನಸ್ಸು ಸ್ಥಿರವಾಗಿರುತ್ತದೆ.

೫. **ಸಂಮೋಹನ** ಎಂದರೆ ಮನುಷ್ಯನನ್ನು ಮೋಹನಮಾಡಿಬಿಡುವ ಶಕ್ತಿ. ಕಾಮವು ಎದ್ದಾಗ ಆ ಸಮಯದಲ್ಲಿ ಅವನಿಗೆ ವಿವೇಕವೇ ಇರಲಾರದಲ್ಲವೇ? ಆಗ ಕರ್ತವ್ಯಾಕರ್ತವ್ಯಪ್ರಜ್ಞೆಯು ಶೂನ್ಯವಾಗಿಬಿಡುತ್ತದೆ.

ಹೀಗೆ ಈ ಐದೂ ಪಂಚಬಾಣನ **ಪಂಚ ಬಾಣಗಳು**. ಈ ಬಾಣಗಳನ್ನು ಕಾಮನು ಮನುಷ್ಯರ ಮೇಲೆ ಪ್ರಯೋಗಮಾಡುತ್ತಾನೆ.

39. ಸಪ್ತ ಸ್ವರಗಳು

ವೇದಮಂತ್ರಗಳಲ್ಲಿ ಉದಾತ್ತ, ಅನುದಾತ್ತ ಮತ್ತು ಸ್ವರಿತಗಳೆಂದು ಮೂರು ಸ್ವರಗಳಿವೆಯಲ್ಲವೇ? ಸ್ವರಸಹಿತವಾಗಿಯೇ ವೇದಮಂತ್ರಗಳನ್ನು ಹೇಳಬೇಕು. ಅದರಂತೆಯೇ, ಗಾಂಧರ್ವವಿದ್ಯೆಯೆಂದೇ ಪ್ರಸಿದ್ಧವಾಗಿರುವ ಸಂಗೀತಶಾಸ್ತ್ರ ದಲ್ಲಿಯೂ ಏಳು ಸ್ವರಗಳಿರುತ್ತವೆ. ಈ ಕೆಳಗಿನ ಶ್ಲೋಕದಲ್ಲಿ ಸಂಗೀತದ ಏಳು ಸ್ವರಗಳನ್ನು ಪಟ್ಟಿಮಾಡಿ ಹೇಳಿರುತ್ತದೆ:

ನಿಷಾದರ್ಷಭಗಾಂಧಾರ ಷಡ್ಜ ಮಧ್ಯಮ ಧೈವತಾಃ।
ಪಂಚಮಶ್ಚೇತ್ಯಮೀ "ಸಪ್ತ ತಂತ್ರೀಕಂಠೋತ್ಥಿತಾಃ ಸ್ವರಾಃ"॥

೧. **ನಿಷಾದ ಸ್ವರ** ಎಂದರೆ ಆನೆಯ ಧ್ವನಿ

೨. **ಋಷಭ ಸ್ವರ** ಎಂದರೆ ಹಸು ಎತ್ತುಗಳು ಕೂಗುವ ಸ್ವರ

೩. **ಗಾಂಧಾರ ಸ್ವರ** ಎಂದರೆ ಆಡುಕುರಿಗಳು ಕೂಗುವ ಸ್ವರ

೪. **ಷಡ್ಜ ಸ್ವರ** ಎಂದರೆ ನವಿಲಿನ ಸ್ವರ

೫. **ಮಧ್ಯಮ ಸ್ವರ** ಎಂದರೆ ಕ್ರೌಂಚಪಕ್ಷಿಯ ಧ್ವನಿ

೬. **ಧೈವತ ಸ್ವರ** ಎಂದರೆ ಕುದುರೆಯ ಸ್ವರ

೭. **ಪಂಚಮ ಸ್ವರ** ಎಂದರೆ ಕೋಗಿಲೆಯ ಕಂಠದ ಧ್ವನಿ.

ಷಡ್ಜಂ ಮಯೂರೋ ವದತಿ ಗಾವೋ ನರ್ದಂತಿ ಚರ್ಷಭಮ್
ಅಜಾವಿಕೌ ತು ಗಾಂಧಾರಂ ಕ್ರೌಂಚೋ ನದತಿ ಮಧ್ಯಮಮ್।
ಪುಷ್ಪಸಾಧಾರಣೇ ಕಾಲೇ ಕೋಕಿಲೋ ರೌತಿ ಪಂಚಮಮ್
ಅಶ್ವಸ್ತು ಧೈವತಂ ರೌತಿ ನಿಷಾದಂ ರೌತಿ ಕುಂಜರಃ॥

*ನವಿಲು **ಷಡ್ಜಸ್ವರ**ವನ್ನೂ, ಎತ್ತುಗಳು **ಋಷಭಸ್ವರ**ವನ್ನೂ, ಆಡುಕುರಿಗಳು **ಗಾಂಧಾರಸ್ವರ**ವನ್ನೂ, ಕ್ರೌಂಚಪಕ್ಷಿಯು **ಮಧ್ಯಮಸ್ವರ**ವನ್ನೂ, ಕೋಗಿಲೆಯು **ಪಂಚಮಸ್ವರ**ವನ್ನೂ, ಕುದುರೆಯು **ಧೈವತಸ್ವರ**ವನ್ನೂ, ಆನೆಯು **ನಿಷಾದ ಸ್ವರ**ವನ್ನೂ ಅನುಸರಿಸಿ ಧ್ವನಿಗೈಯುತ್ತವೆ.*

ಸ ರಿ ಗ ಮ ಪ ಧ ನಿ ಎಂಬ **ಏಳು** ಸ್ವರಗಳಲ್ಲಿಯೇ ಇಡೀ ಸಂಗೀತಶಾಸ್ತ್ರವು ಹೆಣೆಯಲ್ಪಟ್ಟಿದೆ. ಸರಿಯಾದ ಗುರುಗಳಿಂದ ಚೆನ್ನಾಗಿ ಈ ಸಪ್ತ ಸ್ವರಗಳನ್ನು ಗುರುತಿಸಿಕೊಂಡೇ ವಿದ್ಯಾರ್ಥಿಗಳು ಶಾಸ್ತ್ರೀಯ ಸಂಗೀತವನ್ನು ಅಭ್ಯಾಸಮಾಡಬೇಕು.

40. ಏಳು ಮೋಕ್ಷಪ್ರಾಪ್ತಿ ನಗರಿಗಳು

ಭಾರತರಾಷ್ಟ್ರವೇ ಪುಣ್ಯ ರಾಷ್ಟ್ರ; ಪುಣ್ಯಕ್ಷೇತ್ರಗಳಿಂದ ತುಂಬಿರುವ ರಾಷ್ಟ್ರವೆಂದರೆ ಭಾರತರಾಷ್ಟ್ರ. ಕೆಲವು ಕ್ಷೇತ್ರಗಳು ಪುಣ್ಯಕ್ಷೇತ್ರಗಳೆಂದೂ ಮುಕ್ತಿಕ್ಷೇತ್ರಗಳೆಂದೂ ಪುರಾಣಗಳಲ್ಲಿ ಪ್ರಸಿದ್ಧವಾಗಿರುತ್ತವೆ. ಈ ಕೆಳಗಿನ ಶ್ಲೋಕದಲ್ಲಿ **ಏಳು** ಮೋಕ್ಷಪುರಿಗಳನ್ನು ಪಟ್ಟಿಹಾಕಿರುತ್ತದೆ:

ಅಯೋಧ್ಯಾ ಮಥುರಾ ಮಾಯಾ ಕಾಶೀ ಕಾಂಚೀ ಅವಂತಿಕಾ।
ಪುರೀ ದ್ವಾರಾವತೀ ಚೈವ "ಸಪ್ತೈತಾ ಮೋಕ್ಷದಾಯಕಾಃ"॥

೧. **ಅಯೋಧ್ಯಾ:** ಶ್ರೀರಾಮಚಂದ್ರನು ಅವತರಿಸಿದ ಪುಣ್ಯಭೂಮಿ, ಅಯೋಧ್ಯಾ. ಸರಯೂನದಿಯ ತೀರದಲ್ಲಿರುವ ಅಯೋಧ್ಯಾನಗರಿಯು ಸಾಧುಸಂನ್ಯಾಸಿಗಳಿಗೆ ಮೋಕ್ಷಪ್ರಾಪ್ತಿಗೆ ಸಾಧನವಾಗಿರುತ್ತದೆ.

೨. **ಮಥುರಾ:** ಪವಿತ್ರವಾದ ಭಕ್ತಿಪ್ರವಾಹಕ್ಷೇತ್ರ. ಶ್ರೀಕೃಷ್ಣಭಗವಂತನ ಜನ್ಮಸ್ಥಾನ. ತಪಸ್ವಿಗಳಿಂದ ವಾಸಮಾಡಲ್ಪಡುತ್ತಿರುವ ಪುಣ್ಯಭೂಮಿ.

೩. **ಮಾಯಾ:** ಮಾಯಾ ಎಂದರೆ ಹರಿದ್ವಾರ. ಹಿಮಾಲಯಗಳೆಂಬ ತಪೋಭೂಮಿಗೆ ಮೆಟ್ಟಿಲಿನಂತಿರುವ ಹರಿದ್ವಾರವು ಅತ್ಯಂತ ಶ್ರೇಷ್ಠವಾಗಿದೆ. ಹರಿದ್ವಾರ, ಹೃಷೀಕೇಶಗಳು ಗಂಗಾತೀರದ ತಪೋಭೂಮಿಗಳಾಗಿರುತ್ತವೆ.

೪. **ಕಾಶೀ:** ವಿಶ್ವನಾಥನ ಸಂನಿಧಾನದ ಪವಿತ್ರಕ್ಷೇತ್ರ. ಗಂಗಾನದಿಯ ದಡದಲ್ಲಿರುವ ತಪೋಭೂಮಿ. ಕಾಶಿಯಲ್ಲಿ ದೇಹತ್ಯಾಗವನ್ನು ಮಾಡಿದ ಮಾತ್ರದಿಂದಲೇ ಮುಕ್ತಿ. ಕಾಶಿಯ ವಿಶ್ವೇಶ್ವರನು ದ್ವಾದಶಜ್ಯೋತಿರ್ಲಿಂಗಗಳಲ್ಲಿ ಒಬ್ಬನು. **ವಾರಾಣಸೀ** ಎಂದೇ ಇದು ಪ್ರಸಿದ್ಧವಾಗಿದೆ.

೫. **ಕಾಂಚೀ: ನಗರೀಷು ಕಾಂಚೀ,** ನಗರಗಳಲ್ಲಿ ಅತ್ಯಂತ ಸುಂದರವಾದ ನಗರಿಯೆಂದರೆ ಕಾಂಚೀ. ಕಾಮಾಕ್ಷೀದೇವಿಯ ಶ್ರೀಕ್ಷೇತ್ರವಿದು. ಶಿವ ಹಾಗೂ ವಿಷ್ಣು ಇವರಿಬ್ಬರ ಸಾಂನಿಧ್ಯದ ತಪೋಭೂಮಿಯಿದು. ಕಾಂಚೀ ಶ್ರೀಶಂಕರರ ಮಠವೂ ಇದೆ.

೬. **ಅವಂತಿಕಾ:** ಮಧ್ಯಪ್ರದೇಶದ ಉಜ್ಜಯಿನೀನಗರಕ್ಕೆ **ಅವಂತಿಕಾ** ಎಂದು ಹೆಸರು. ಪವಿತ್ರವಾದ ಕ್ಷಿಪ್ರಾನದಿಯ ತೀರದ, **ಶ್ರೀಮಹಾಕಾಲೇಶ್ವರ** ಜ್ಯೋತಿರ್ಲಿಂಗದ ಈ ನಗರಿಯು ಮೋಕ್ಷಪ್ರದವಾಗಿದೆ.

೭. **ದ್ವಾರಾವತೀ:** ದ್ವಾರಕಾನಗರೀ ಶ್ರೀಕೃಷ್ಣಪರಮಾತ್ಮನ ಸನ್ನಿಧಿ. ಸಹಸ್ರಾರು ಋಷಿಮುನಿಗಳ ತಪೋಭೂಮಿ. ಇದೂ ಮುಕ್ತಿಧಾಮವೇ ಆಗಿರುತ್ತದೆ.

ವೇದಾಂತಚಕ್ರವರ್ತಿ, ಮಹಾಮಹೋಪಾಧ್ಯಾಯ ವಿದ್ವಾನ್
ಡಾ|| ಕೆ. ಜಿ. ಸುಬ್ರಾಯಶರ್ಮಾರವರ ವೇದಾಂತ ಗ್ರಂಥಗಳು

1. "ವಿವೇಕಭಾಸ್ಕರ"
2. "ಶಾಂಕರ ಸಂವತ್ಸರ"
3. "ವೇದಾಂತ ಸಂವತ್ಸರ"
4. "ಗೀತಾ ಸಂವತ್ಸರ"
5. "ಸುಭಾಷಿತ ಸಂವತ್ಸರ"
6. "ಪ್ರಬೋಧ ಚಿಂತಾಮಣಿ"
7. "ಜ್ಞಾನಾಮೃತಬಿಂದು"
8. "ಗೀತೋಪದೇಶಾಮೃತ"
9. "ಜರ್ಮನಿಯಲ್ಲಿ ಶರ್ಮರು"
10. ಸುವರ್ಣವೇದಾಂತಿರತ್ನ ವಿದ್ವಾನ್ ಕೆ. ಜಿ. ಸುಬ್ರಾಯಶರ್ಮಾ
11. "ವ್ಯಾಸ ಪೂರ್ಣಿಮಾ"
12. "ಕೇನ ರಸಾಯನ"
13. "ಜೀವನ್ಮುಕ್ತ ಚತುಷ್ಟಯ"
14. "ಶಿವರಾತ್ರಿ"
15. "50 Reflections on Morals"
16. "ಶಾಂತಿಮಂತ್ರಗಳು"
17. "ವೇದಮಹಿಮೆ"
18. "ನವೋಪನಿಷದಃ"
19. "ಪೀಯೂಷ ಧಾರಾ"
20. "ಆರಾಧನ ಸಂದೇಶ"
21. "ಆದಿಗುರು ಶಂಕರ"
22. "48 'ಅಷ್ಟಕ' ಸ್ತೋತ್ರಗಳು"
23. "ಕನ್ನಡ ಶಂಕರ"
24. "ಸರಳ ರಮಣ"
25. "ನ ಹಿ ಜ್ಞಾನೇನ ಸದೃಶಂ"
26. "ಉಪದೇಶಸಿಂಚನಂ"
27. "ಸುದಿನಂ"
28. "ಶಂಕರಜಯಂತೀ"
29. "ಬಾಲರಾಮಾಯಣಂ"
30. "ಸಂದೇಶಾಮೃತಂ"
31. "ವಿಭೂತಿರೂಪಿಕೃಷ್ಣ"
32. "ಅಧ್ಯಾರೋಪಾಪವಾದ"
33. "ಶಂಕರ Ph.D."
34. "ಗೌಡಪಾದಾಮೃತ"
35. "ವೇದಾಂತಮಕರಂದ"
36. "ಶ್ರೀರಮಣಸುಧಾ"
37. "ಧರ್ಮ-ವೇದ-ಬ್ರಹ್ಮ"
38. "ಸದ್ಗುರೂಪಾಸನಂ"
39. "ಜನ್ಮಾಂತರ"
40. "ಗೀತಾಕಲ್ಪತರು"
41. "ಮಹರ್ಷಿಗಳು"
42. "ಉಪನಯನಂ"
43. "ಔಪನಿಷದ ಪುರುಷ"
44. "ಸಂಸ್ಕೃತ ವೈಭವ"
45. "ತೈತ್ತಿರೀಯದ ತಿರುಳು"
46. "ರಾಮಾಂಜನೇಯ"
47. ವೇದಾಂತದಲ್ಲಿನ ಪದಗಳೂ ಅರ್ಥಗಳೂ
48. "ತತ್ತ್ವಮಸಿ"
49. "ಬ್ರಹ್ಮಜ್ಞಾನಫಲಂ"
50. "ಜ್ಞಾನಸಾಧನಗಳು"
51. "108 'ಅಷ್ಟಕ' ಸ್ತೋತ್ರಗಳು"
52. "ಚತುಷ್ಟಯ ಸಂಗ್ರಹ"
53. "ಸಂಗ್ರಾಹಕ ಶ್ಲೋಕಗಳು"

ಪ್ರವಚನಗಳು ಸಿ.ಡಿ.ಗಳಲ್ಲಿ ಲಭ್ಯವಿವೆ

1. ದಶೋಪನಿಷತ್ತುಗಳ ಸಂದೇಶಗಳು
2. ಬ್ರಹ್ಮಸೂತ್ರಭಾಷ್ಯ, ಚತುಸ್ಸೂತ್ರೀಭಾಷ್ಯ
3. ಶ್ವೇತಾಶ್ವತರೋಪನಿಷತ್ ಶಾಂಕರಭಾಷ್ಯಂ
4. ಐತರೇಯೋಪನಿಷತ್ ಶಾಂಕರಭಾಷ್ಯಂ
5. ಈಶಾವಾಸ್ಯೋಪನಿಷತ್ ಶಾಂಕರಭಾಷ್ಯಂ
6. ಅಧ್ಯಾರೋಪ ಅಪವಾದಪ್ರಕ್ರಿಯೆ
7. ನಮಗೆ ಇಂದು ವೇದಾಂತ ಬೇಕೇ?

ವಿವರಗಳಿಗೆ ಮತ್ತು ಪ್ರತಿಗಳಿಗೆ ಲೇಖಕರಲ್ಲಿ ವಿಚಾರಿಸಿರಿ :

ವಿದ್ವಾನ್ ಡಾ|| ಕೆ. ಜಿ. ಸುಬ್ರಾಯಶರ್ಮಾ, M.A., D.Litt, ಬೆಂಗಳೂರು-61

ದೂರವಾಣಿ: 080-2639 6786; ಮೊಬೈಲ್: 98862 81622

ಡಾ॥ ಕೆ. ಜಿ. ಸುಬ್ರಾಯಶರ್ಮಾರವರ **“108 ‘ಅಷ್ಟಕ’ ಸ್ತೋತ್ರಗಳು”**–51 ಕೃತಿರತ್ನದ
ಲೋಕಾರ್ಪಣ ಸಮಾರಂಭದಲ್ಲಿ ಶರ್ಮಾದಂಪತಿಗಳಿಗೆ ಗೌರವಸನ್ಮಾನ, **31-7-2014, ಗುರುವಾರ**

“ಶಾಂಕರಾದ್ವೈತವೇದಾಂತಾಚಾರ್ಯ” ವಿದ್ವಾನ್ ಡಾ॥ ಕೆ. ಜಿ. ಸುಬ್ರಾಯಶರ್ಮಾರವರ
“ಬ್ರಹ್ಮಜ್ಞಾನಫಲಂ”–49 ಕೃತಿರತ್ನದ ಲೋಕಾರ್ಪಣ ಸಮಾರಂಭ , 16-5-2014, ಶುಕ್ರವಾರ

ಮಹಾಮಹೋಪಾಧ್ಯಾಯ ವಿದ್ವಾನ್ ಡಾ|| ಕೆ. ಜಿ. ಸುಬ್ರಾಯಶರ್ಮಾರವರ
108 'ಅಷ್ಟಕ' ಸ್ತೋತ್ರಗಳು–51 ಬಿಡುಗಡೆ
31–07–2014, ಗುರುವಾರ
ಸರ್ವರಿಗೂ ಸುಸ್ವಾಗತ